ಸಂಪುಟ 01 | ಸಂಚಿಕೆ 171 | ಶುಕ್ರವಾರ 15 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
REGIONAL KANNADA DAILY MORNING
RNI code: KNKAN/25/A3581
ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಳಿವಿನಂಚಿನಲ್ಲಿರುವ ವನ್ಯಜೀವಿಗಳು ಮತ್ತು ಅವುಗಳ ಆವಾಸಸ್ಥಾನಗಳನ್ನು ರಕ್ಷಿಸುವ ಬಗ್ಗೆ ಜಾಗೃತಿ ದಿನ

ಅಳಿವಿನಂಚಿನಲ್ಲಿರುವ ವನ್ಯಜೀವಿಗಳು ಮತ್ತು ಅವುಗಳ ಆವಾಸಸ್ಥಾನಗಳನ್ನು ರಕ್ಷಿಸುವ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಮೇ ತಿಂಗಳ ಮೂರನೇ ಶುಕ್ರವಾರ (ಮೇ 15, 2026) ಅಳಿವಿನಂಚಿನಲ್ಲಿರುವ ಪ್ರಭೇದಗಳ ದಿನವನ್ನು ಆಚರಿಸಲಾಗುತ್ತದೆ. ಮೊದಲು 2006 ರಲ್ಲಿ ಆಚರಿಸಲಾದ ಇದು ಅಳಿವಿನಂಚಿನಲ್ಲಿರುವ ಪ್ರಭೇದಗಳ ಕಾಯ್ದೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ ಮತ್ತು ಕಾರ್ಯಕ್ರಮಗಳು, ಶಿಕ್ಷಣ ಮತ್ತು ಸಮುದಾಯ ಕ್ರಿಯೆಯ ಮೂಲಕ ಸಂರಕ್ಷಣಾ ಪ್ರಯತ್ನಗಳನ್ನು ಪ್ರೋತ್ಸಾಹಿಸುತ್ತದೆ.

## ಸುಭಾಷಿತ

ಮುಕ್ತ ವಾತಾವರಣದಲ್ಲಿ ಕೆಲಸ ಮಾಡುವವರು ಮಾತ್ರ ಶ್ರೇಷ್ಠ ವಿಚಾರಗಳನ್ನು ಸೃಷ್ಟಿಸಬಲ್ಲರು.

–ಆಲ್ಬರ್ಟ್ ಐನ್‌ಸ್ಟೀನ್

# ಕರ್ನಾಟಕದಲ್ಲೂ ಕೇರಳ ಮಾದರಿ ಸೂತ್ರಕ್ಕೆ 'ಕೈ'ಕಮಾಂಡ್ ತಂತ್ರ..?



ಬೆಂಗಳೂರು: ಕೇರಳದಲ್ಲಿ ಮುಖ್ಯಮಂತ್ರಿ ಆಯ್ಕೆಯ ವೇಳೆ ಪ್ರಭಾವಕ್ಕೆ ಮಣಿಯದೇ, ನಾಯಕತ್ವದ ಜನಪ್ರಿಯತೆಗೆ ಮಣೆ ಹಾಕುವ ಮೂಲಕ ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕ ರಾಜ್ಯದ ನಾಯಕತ್ವ ವಿವಾದಕ್ಕೆ ಸ್ಪಷ್ಟ ಸಂದೇಶ ರವಾನಿಸಿದೆ. ಕೇರಳದಲ್ಲಿ ವಿ.ಡಿ.ಸತೀಶನ್ ವಿರೋಧ ಪಕ್ಷದ ನಾಯಕನಾಗಿ ನಿರ್ಗಮಿತ ಎಲ್‌ಡಿ–ಎಫ್ ಸರ್ಕಾರದ ವಿರುದ್ಧ ಭಾರೀ ಹೋರಾಟ ಮಾಡಿದ್ದರು. ಈ ಮೂಲಕ ಕೇರಳಂನಲ್ಲಿ ಜನಪ್ರಿಯ ನಾಯಕರಾಗಿ ರೂಪುಗೊಂಡಿದ್ದರು.

ಕೆ.ಸಿ.ವೇಣುಗೋಪಾಲ್ ರಾಷ್ಟ್ರ ರಾಜಕಾರಣದಲ್ಲಿ ಮಗ್ನರಾಗಿದ್ದವರು, ಚುನಾವಣೆ ಸಂದರ್ಭದಲ್ಲಿ ಕೇರಳಕ್ಕೆ ಹೆಚ್ಚಿನ ಗಮನ ಕೊಟ್ಟಿದ್ದರು. ತಾವು ಉಸ್ತುವಾರಿ ನಿರ್ವಹಣೆ ಮಾಡಿದ ರಾಜ್ಯಗಳಲ್ಲಿರುವ ಶ್ರೀಮಂತ ನಾಯಕರನ್ನು ಸಂಪರ್ಕಿಸಿ ಅವರ ಮೂಲಕ ಕೇರಳ ವಿಧಾನಸಭಾ ಚುನಾವಣೆಗೆ ಸಂಪನ್ಮೂಲ ಕ್ರೋಢೀಕರಿಸಿದ್ದರು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾ ಅವರನ್ನು ಕೇರಳದ ವೈನಾಡಿನಿಂದ ಸಂಸದರಾಗಿ ಗೆಲ್ಲಿಸಿ ಕಳುಹಿಸುವಲ್ಲಿ ವೇಣುಗೋಪಾಲ್ ಅವರ ಪಾತ್ರ ಪ್ರಮುಖವಾಗಿತ್ತು.

ಹೈಕಮಾಂಡ್ ನಾಯಕರ ಜೊತೆಗೆ ಹೆಚ್ಚಿನ ಸಂಪರ್ಕ ಹಾಗೂ ಬಾಂಧವ್ಯ ಹೊಂದಿದ್ದರಿಂದ ಅದನ್ನು ಬಳಕೆ ಮಾಡಿಕೊಂಡು ಕೇರಳದಲ್ಲಿ ಮುಖ್ಯಮಂತ್ರಿಯಾಗುವ ಪ್ರಯತ್ನ ಮಾಡಿದ್ದರು. ಆದರೆ ಯುಡಿಎಫ್ ಕೂಟದ ಮುಸ್ಲಿಂ ಲೀಗ್‌ನ ಮುಖಂಡರು ವೇಣುಗೋಪಾಲ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಲು ವಿರೋಧ ವ್ಯಕ್ತ ಪಡಿಸಿದರು. ಸಂಸದರಾಗಿರುವ ವೇಣುಗೋಪಾಲ್ ಅವರು ವಿಧಾನಸಭೆಯ ಉಪಚುನಾವಣೆಯಲ್ಲಿ ಆಯ್ಕೆಯಾಗಬೇಕು. ಒಂದು ವೇಳೆ ಅಲ್ಲಿ ಸೋಲು ಕಂಡರೆ, ನಾಯಕತ್ವದ ಗೊಂದಲ ಉಂಟಾಗುವುದಲ್ಲದೆ ಸರ್ಕಾರದ ಭವಿಷ್ಯ ಕೂಡ ಅತಂತ್ರ ಸ್ಥಿತಿಗೆ ತಲುಪಲಿದೆ ಎಂಬ ಕಾರಣಕ್ಕಾಗಿ ಮುಸ್ಲಿಂಲೀಗ್ ಪ್ರಬಲ ವಿರೋಧ ವ್ಯಕ್ತಪಡಿಸಿತು. ಅಳೆದು ತೂಗಿ ಕಾಂಗ್ರೆಸ್ ಹೈಕಮಾಂಡ್ ವಿ.ಡಿ.ಸತೀಶನ್‌ಗೆ ಮುಖ್ಯಮಂತ್ರಿ ಸ್ಥಾನ ನೀಡಿದೆ.

ಕರ್ನಾಟಕದಲ್ಲಿ ಸಿದ್ದರಾಮಯ್ಯ ಜನಪ್ರಿಯ ನಾಯಕ ಎಂದು ಗುರುತಿಸಿಕೊಂಡಿದ್ದಾರೆ. 2ನೇ ಅವಧಿಗೆ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗಿದೆ. ಕೆ.ಸಿ.ವೇಣುಗೋಪಾಲ್ ಅವರಂತೆ ಡಿ.ಕೆ.ಶಿವಕುಮಾರ್ ಅವರೂ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದು, ಹೈಕಮಾಂಡ್ ಮಟ್ಟದಲ್ಲಿ ಹೆಚ್ಚು ಪ್ರಭಾವ ಹೊಂದಿದ್ದಾರೆ. ನಾಯಕತ್ವ ಬದಲಾಗಬೇಕು ಮತ್ತು 2023ರಲ್ಲಿ ಆಶ್ವಾಸನೆ ನೀಡಿದಂತೆ ತಮಗೆ ಈಗ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕು ಎಂದು ಪಟ್ಟು ಹಿಡಿದಿದ್ದಾರೆ. ಇದು ರಾಜ್ಯದಲ್ಲಿ ನಾಯಕತ್ವದ ಬದಲಾವಣೆ ಸಂಬಂಧಪಟ್ಟಂತೆ ತೀವ್ರ ವಿವಾದವನ್ನು

3ನೇ ಪುಟಕ್ಕೆ

## ಮೇ.20ರಂದು ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 33/11 ಕೆವಿ ಕಲ್ಮಲಾ ವಿದ್ಯುತ್ ಉಪ–ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮೇ.20ರ ಬೆಳಿಗ್ಗೆ 08 ಗಂಟೆಯಿಂದ ಸಾಯಂಕಾಲ 05 ಗಂಟೆವರೆಗೆ ಕಲ್ಮಲಾ ಉಪ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.




ಅಂದು ಬೆಳಿಗ್ಗೆ 8ರಿಂದ ಕಲ್ಮಲಾ, ಮುರಾಂಪುರ, ಸುಲ್ತಾನಪುರ, ಜಾಗೀರವೆಂಕಟಪುರ, ಮಂಚ್ಲಾಪುರ, ಜೇಗರಕಲ್, ರಘುನಾಥನಹಳ್ಳಿ, ವಿಜಯನಗರ ಕ್ಯಾಪ್, ಮಾರೆಮ್ಮಕ್ಯಾಪ್, ಹುಣಿಸಿಹಾಳಹುಡ, ಕಸ್ಬೆಕ್ಯಾಂಪ್, ಸೀತಾನಗರ ನಗರ ಕ್ಯಾಂಪ್, ಹೊಸ್ಪೇಟ, ಮರ್ಚೆಡ್, ಗೋನಾಳ, ಪತ್ತೇಪುರ, 7 ಮೇಲ್ ಇಂಡಸ್ಟ್ರಿಯಲ್ ಏರಿಯಾ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಸ್ಕಿಯಲ್ಲಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘ ಸಭೆ



ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದ ಶ್ರೀ ಗುರು ರಾಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಕಚೇರಿಯಲ್ಲಿ

ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತದ ಜಿಲ್ಲಾಧ್ಯಕ್ಷರಾದ ಎಂ. ದೊಡ್ಡಬಸವರಾಜ್‌ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಸಭೆ ಗುರುವಾರ ಜರುಗಿತು.

ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತದ ಸಭೆಯಲ್ಲಿ ಮಸ್ಕಿಯ ಶ್ರೀ ಗುರು ರಾಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಬಸನಗೌಡ ಪೋ. ಪಾಟೀಲ್, ಹಾಗೂ ಸೋಮನಾಥ ಅವರನ್ನು ಹಾಗೂ ಒಕ್ಕೂಟದ ಆಡಳಿತ ಮಂಡಳಿಯವರಿಗೆ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷ ಎಮ್. ದೊಡ್ಡಬಸವರಾಜ್, ನಿರ್ದೇಶಕರಾದ, ಬಸನಗೌಡ ಪೋಲಿಸ್ ಪಾಟೀಲ್, ಕುಮಾರೆಪ್ಪ, ಲಿಂಗರಾಜ್ ಪಾಟೀಲ್, ಮಲ್ಲನಗೌಡ ನಕ್ಕುಂದಿ, ಶ್ರೀ ಬಸವರಾಜ್ ಡೊನ್ನಮರಡಿ, ಒಕ್ಕೂಟದ ಮುಖ್ಯಕಾರ್ಯನಿರ್ವಾಹಕ ಹುಸೇನಾಸಬ್, ರಾಮಲಿಂಗೇಶ್ವರ ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ಸೋಮನಾಥ ಹಾಗೂ ಮಸ್ಕಿಯಲ್ಲಿನ ಸೌಹಾರ್ದ ಸಹಕರಿಗಳ ಅಧ್ಯಕ್ಷರು & ಮುಖ್ಯಕಾರ್ಯನಿರ್ವಾಹಕರು ಸಭೆಯಲ್ಲಿ ಭಾಗವಹಿಸಿದ್ದರು.

## ಮಕ್ಕಳು ಕೌಶಲ್ಯವನ್ನು ಬೆಳೆಸಿಕೊಳ್ಳಲು ಬಸವರಾಜ ಪಾಟೀಲ ಸೇಡಂ ಕರೆ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದಲ್ಲಿರುವ ಅಭಿನಂದನ್ ಸ್ಫೂರ್ತಿ ಧಾಮಕ್ಕೆ ಭೇಟಿ ನೀಡಿದ ಮಾಜಿ ಸಚಿವರಾದ ಬಸವರಾಜ್ ಪಾಟೀಲ್ ಸೇಡಂ ರವರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿ ಪ್ರಸ್ತುತ ದಿನಗಳಲ್ಲಿ ನಾವು ಶಿಕ್ಷಣದ ಜೊತೆ ಜೊತೆಗೆ ಹಲವಾರು ರೀತಿಯ ಕೌಶಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.




ವಿದ್ಯಾರ್ಥಿಗಳಿಗೆ ಕಷ್ಟಗಳು ಸರ್ವೇಸಾಮಾನ್ಯ ಕಷ್ಟಗಳನ್ನು ಮೀರಿ ಮೆಟ್ಟಿ ನಿಂತಾಗ ಮಾತ್ರ ಪ್ರಪಂಚದಲ್ಲಿ ಸಾಧನೆ ಮಾಡಲು ಸಾಧ್ಯ. ಅಭಿನಂದನ್ ಸ್ಫೂರ್ತಿ ಧಾಮ ದಲ್ಲಿರುವ ಮಕ್ಕಳ ಕುಟುಂಬದಲ್ಲಿ ಕಷ್ಟಗಳಿರಬಹುದು ಆದರೆ ಈ ಮಕ್ಕಳಿಗೆ ಸಾಧನೆ ಮಾಡುವ ಹುಮ್ಮಸ್ಸು ಖಂಡಿತವಾಗಿಯೂ ಇದೆ ಮುಂದಿನ ದಿನಗಳಲ್ಲಿ ಈ ಮಕ್ಕಳು ಸಮಾಜದಲ್ಲಿ ಹೆಮ್ಮರವಾಗಿ ಬೆಳೆಯುತ್ತಾರೆ ಎಂದರು.


ಈ ಸಂದರ್ಭದಲ್ಲಿ ಹಿರಿಯರಾದ ವೀರೇಶ್ ಸೌದ್ರಿ, ಶಿಕ್ಷಕರಾದ ರಾಮಸ್ವಾಮಿ, ಮಹಾಂತೇಶ್ ಎಚ್ , ಜಾಫರಮಿಯಾ ಅಭಿನಂದನ್ ಸಂಸ್ಥೆಯ ಸಂಸ್ಥಾಪಕ ರಾಮಣ್ಣ ಹಂಪರಗುಂದಿ, ಶೃತಿ ಹಂಪರಗುಂದಿ ಹಾಗೂ ಸದಸ್ಯರಾದ ಮಂಜುನಾಥ್ ಜೋಗಿನ್, ಬಸಲಿಂಗಪ್ಪ ಬಾದರ್ಲಿ, ಕಾರ್ತಿಕ್, ಕಿಶೋರ್ ಹಾಗೂ ಅಭಿನಂದನ್ ಸ್ಫೂರ್ತಿ ಧಾಮದ ಮಕ್ಕಳು ಉಪಸ್ಥಿತರಿದ್ದರು.

## ಬೊಮ್ಮನಹಳ್ಳಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆ ಭಸ್ಮ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಸಮೀಪದ ಹೊಸೂರು ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಬೊಮ್ಮನಹಳ್ಳಿ ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾದ ಅಗ್ನಿ ಅವಘಡದಲ್ಲಿ ಮನೆ ಸಂಪೂರ್ಣವಾಗಿ ಭಸ್ಮಗೊಂಡ ಘಟನೆ ಬುಧವಾರ ಸಂಜೆ ನಡೆದಿದೆ.

ಬೊಮ್ಮನಹಳ್ಳಿ ಗ್ರಾಮದ ಶಿವರಾಜ ತಂದೆ ಬುಡಪ್ಪ ದೊಡ್ಡಮನೆ ಹರಿಜನ ಇವರ ಮನೆಗೆ ಇಂದು ಸಂಜೆ ಸುಮಾರು 6:30 ಗಂಟೆಗೆ ಏಕಾಏಕಿ ಬೆಂಕಿ ತಗುಲಿದ್ದು, ಕ್ಷಣಾರ್ಧದಲ್ಲೇ ಅಗ್ನಿ ವ್ಯಾಪಕವಾಗಿ ಹಬ್ಬಿದೆ. ಪರಿಣಾಮ ಮನೆಯಲ್ಲಿದ್ದ ಟಿವಿ, ಫ್ರಿಜ್, ಹಾಸಿಗೆ,




ಧಾನ್ಯ ಸೇರಿದಂತೆ ಲಕ್ಷಾಂತರ ರೂಪಾಯಿ ಮೌಲ್ಯದ ಗೃಹೋಪಯೋಗಿ ವಸ್ತುಗಳು ಸುಟ್ಟು ಕರಕಲಾಗಿವೆ.

ಘಟನೆಯ ವೇಳೆ ಕುಟುಂಬದ ಸದಸ್ಯರು ಮನೆಯಿಂದ ಹೊರಗೆ ಬಂದಿದ್ದರಿಂದ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಬೆಂಕಿ ಕಾಣಿಸಿಕೊಂಡ ತಕ್ಷಣ ಸ್ಥಳೀಯ ನಿವಾಸಿಗಳು ನೀರು ಸುರಿದು ಬೆಂಕಿ ನಂದಿಸಲು ಪ್ರಯತ್ನಿಸಿದರೂ ಬೆಂಕಿಯ ತೀವ್ರತೆ ಹೆಚ್ಚಾದ ಕಾರಣ ಮನೆ ಸಂಪೂರ್ಣ ಸುಟ್ಟು ಹೋಗಿದೆ. ಅಗ್ನಿ ಅವಘಡದಿಂದ ಕುಟುಂಬ ಸಂಕಷ್ಟಕ್ಕೆ ಸಿಲುಕಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪರಿಹಾರ ಒದಗಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ವಕ್ಫ್ ಆಸ್ತಿ ಕಬಳಿಕೆ, ಅಕ್ರಮ ವಾಣಿಜ್ಯ ಮಳಿಗೆ ನಿರ್ಮಾಣ ಆರೋಪ : ತನಿಖೆಗೆ ಆಗ್ರಹ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ವಕ್ಫ್ ಆಸ್ತಿ, ಖಬರಸ್ಥಾನ ಜಾಗ ಹಾಗೂ ಈದ್ಗಾ ಕಮಿಟಿ ವಿರುದ್ಧ ಗಂಭೀರ ಆರೋಪಗಳು ಕೇಳಿಬಂದಿದ್ದು, ಸಂಪೂರ್ಣ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ದಲಿತ ಸೇನೆ ವತಿಯಿಂದ ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ.

ಮಾನ್ವಿ ಪಟ್ಟಣದ ಸರ್ವೇ ನಂ.279/ಕ1 ರ ಒಟ್ಟು 15.39 ಎಕರೆ ಜಾಗದಲ್ಲಿ 11.07 ಎಕರೆ ಗಾಯರಾಣ (ನಮಾಜಗೇರಿ) ಹಾಗೂ 4.32 ಎಕರೆ ವಕ್ಫ್ ಬೋರ್ಡ್ ಈದ್ಗಾ ಆಸ್ತಿ ದಾಖಲಾಗಿದ್ದು, ಇದೇ ಸ್ಥಳದಲ್ಲಿ ಈದ್ಗಾ ಶಾದಿ ಮಹಲ್ ನಿರ್ಮಾಣಗೊಂಡಿದೆ. ಆದ–'ರೆ ಈದ್ಗಾ ಕಮಿಟಿಯ ಅಧ್ಯಕ್ಷರಾಗಿರುವ ಗಫೂರ್ ಸಾಬ್ ಅವರು ವಕ್ಫ್ ಆಸ್ತಿಯನ್ನು ಅಕ್ರಮವಾಗಿ ಕಬಳಿಸಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಸುಖೊ ಬ್ಯಾಂಕ್ ಸೇರಿದಂತೆ ಹಲವು ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಮಾರಾಟ ಹಾಗೂ ಬಾಡಿಗೆ ಪಡೆಯುತ್ತಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಇದೇ ವೇಳೆ ಸಾರ್ವಜನಿಕ ದಾರಿಯ ಮೇಲೆಯೇ ಛಾವಣಿ ನಿರ್ಮಿಸಿಕೊಂಡು ವಾಸವಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ ಎಂದು ತಿಳಿಸಲಾಗಿದೆ.



ಬಡ ಮುಸ್ಲಿಂ ಸಮುದಾಯದ ಅನುಕೂಲಕ್ಕಾಗಿ ನಿರ್ಮಿಸಲಾದ ಹೈಟೆಕ್ ಈದ್ಗಾ ಶಾದಿ ಮಹಲ್‌ನ್ನು 17–02–2004 ರಂದು ಉದ್ಘಾಟಿಸಲಾಗಿದ್ದು, ಮದುವೆ ಹಾಗೂ ಇತರೆ ಕಾರ್ಯಕ್ರಮಗಳಿಗೆ ?25 ಸಾವಿರದಿಂದ 30 ಸಾವಿರವರೆಗೆ ಹಣ ಪಡೆಯಲಾಗುತ್ತಿದೆ. ಆದ–'ರೆ ಇದುವರೆಗೆ ಯಾವುದೇ ಆಡಿಟ್ ವರದಿ ಅಥವಾ ಆದಾಯ–ಖರ್ಚಿನ ಲೆಕ್ಕಪತ್ರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ಅಲ್ಲದೆ ಇಸ್ಲಾಂ ನಗರದ ಮಸ್ಜಿದ್ ಹುದಾ ಹತ್ತಿರದ ಸರ್ಕಾರಿ ಖಬರಸ್ಥಾನ ಜಾಗದಲ್ಲಿಯೂ ಅಕ್ರಮವಾಗಿ ವಾಣಿಜ್ಯ ಮಳಿಗೆಗಳು ನಿರ್ಮಾಣಗೊಂಡಿದ್ದು, ವಕ್ಫ್ ಇಲಾಖೆಯ ಅನುಮತಿ ಇಲ್ಲದೇ ಲಕ್ಷಾಂತರ ರೂಪಾಯಿ ಮುಂಗಡ ಹಣ ಪಡೆದು ಬಾಡಿಗೆಗೆ ನೀಡಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪುರಸಭೆ ಹಾಗೂ ನಗರಾಭಿವೃದ್ಧಿ ಇಲಾಖೆಯ ಪರವಾನಿಗೆ ಪಡೆಯದೇ ಎಡೆಡ್ ಶಾಲೆ ನಿರ್ಮಿಸಿ ವರ್ಷಕ್ಕೆ ಲಕ್ಷಾಂತರ ರೂಪಾಯಿ ಬಾಡಿಗೆ ಪಡೆಯಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ವಕ್ಫ್ ಹಾಗೂ ಖಬರಸ್ಥಾನ ಜಾಗದ ಸಂಪೂರ್ಣ ದಾಖಲೆ ಪರಿಶೀಲನೆ ನಡೆಸಬೇಕು, ಅಕ್ರಮ ಕಬಳಿಕೆ ಮತ್ತು ದಾಖಲೆ ಸೃಷ್ಟಿ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು, ಕಬಳಿಸಲಾದ ವಕ್ಫ್ ಆಸ್ತಿಯನ್ನು ಮರು ವಕ್ಫ್ ಇಲಾಖೆಗೆ ಹಿಂಪಡೆಯಬೇಕು, ಶಾದಿ ಮಹಲ್ ಹಾಗೂ ಇತರೆ ಆಸ್ತಿಗಳ ಸಂಪೂರ್ಣ ಆಡಿಟ್ ನಡೆಸಬೇಕು ಹಾಗೂ ಪ್ರಸ್ತುತ ಈದ್ಗಾ ಕಮಿಟಿಯನ್ನು ರದ್ದುಪಡಿಸಿ ಹೊಸ ಆಡಳಿತ ಮಂಡಳಿಯನ್ನು ಪಾರದರ್ಶಕವಾಗಿ ರಚಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ತನಿಖೆ ನಡೆಸದಿದ್ದಲ್ಲಿ ಮುಂದಿನ ದಿನಗಳಲ್ಲಿ ದಲಿತ ಸೇನೆ ವತಿಯಿಂದ ಉಗ್ರ ಹೋರಾಟ ನಡೆಸಿ ವಕ್ಫ್ ಇಲಾಖೆಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

## ಸಾಹಿತ್ಯ ಸಿಂಚನ

ಹೂವು

ಮಲ್ಲಿಗೆಯ ಮೃದುವಾದ ನಗುವಿನಲ್ಲಿ
ಪ್ರಕೃತಿಯ ಮೌನ ಹಾಡು ಕೇಳುತ್ತದೆ,
ಗುಲಾಬಿಯ ಕೆಂಪು ರೆಂಬೆಗಳಲ್ಲಿ
ಪ್ರೇಮದ ಮಾತುಗಳು ಅರಳುತ್ತವೆ.

ಬೆಳಗಿನ ಮಂಜಿನ ತುಂತುರು ತಾಗಿ
ಹೂವು ನಗುವ ಕ್ಷಣ ಎಷ್ಟು ಸೊಗಸು,
ಗಾಳಿ ತಾಕಿದಾಗ ತೂಗುವ ರೆಂಬೆಗಳು
ಜೀವನದ ಸಿಹಿ ಕನಸು.

ಮಣ್ಣು ಕೊಟ್ಟ ಸೌಂದರ್ಯ ಇದು,
ಸೂರ್ಯ ಕೊಟ್ಟ ಬಣ್ಣದ ಬೆಳಕು,
ಸಣ್ಣ ಹೂವು ಹೇಳುತ್ತದೆ ನಿಧಾನವಾಗಿ ?
"ಸರಳತೆಯಲ್ಲೇ ಇದೆ ನಿಜವಾದ ಸುಖ."

ಬಾಳು ಕೂಡ ಹೂವಿನಂತೇ,
ಇಂದು ಅರಳಿ ನಾಳೆ ಬೀಳುವದು,
ಆದರೂ ಸುಗಂಧ ಹರಡುವುದು
ಮಾನವನ ನೆನಪಿನಲ್ಲಿ ಉಳಿಯುವುದು

ರವಿಕುಮಾರ್

## "ನೀಟ್ ಪರೀಕ್ಷೆ ರದ್ದು ಕೇಂದ್ರ ಸರಕಾರದ ವೈಫಲ್ಯ" :ಡಾ.ರಝಾಕ್ ಉಸ್ತಾದ್ ಆಗ್ರಹ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ದೇಶದಲ್ಲಿ ಮೇ 3ರಂದು ನಡೆದ ಕೀಯ ನೀಟ್ ಪರೀಕ್ಷೆಯನ್ನು ಕೇಂದ್ರ ಸರ್ಕಾರ ಸಮರ್ಪಕವಾಗಿ ನಡೆಸಲು ವಿಫಲವಾಗಿ ಬಳಿಕ ರದ್ದುಪಡಿಸಿರುವುದು ಪರೀಕ್ಷೆ ಬರೆದ ಸುಮಾರ ವಿದ್ಯಾರ್ಥಿಗಳಿಗೆ ಮಾಡಿದ ಅನ್ಯಾಯವಾಗಿದ್ದು, ಕೇಂದ್ರ ಸರ್ಕಾರದ ದೊಡ್ಡ ಹಗರಣವಾಗಿದೆ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ರಾಜ್ಯ ವಕ್ತಾರ ಡಾ.ರಝಾಕ ಉಸ್ತಾದ ಆರೋಪಿಸಿದ್ದಾರೆ.**

ಕಳೆದ ಐದು-ಆರು ವರ್ಷಗಳಲ್ಲಿ ಮೂರು ಬಾರಿ ನೀಟ್ ಪರೀಕ್ಷೆ ರದ್ದಾಗಿರುವುದು ರಾಷ್ಟ್ರೀಯ ಪರೀಕ್ಷಾ ವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ರಾಜಸ್ಥಾನ ಹಾಗೂ ಹರಿಯಾಣ ರಾಜ್ಯಗಳ ಕೆಲ ಕೋಚಿಂಗ್ ಸೆಂಟರ್‌ಗಳು ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿರುವ ಆರೋಪಗಳು ಕೇಳಿಬರುತ್ತಿದ್ದು, ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರದ ಪಾತ್ರದ



ಮೇಲೂ ಅನುಮಾನ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವರು ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ವೈದ್ಯಕೀಯ ಪ್ರವೇಶಕ್ಕಾಗಿ ಲಕ್ಷಾಂತರ ವಿದ್ಯಾರ್ಥಿಗಳು ಎರಡು-ಮೂರು ವರ್ಷಗಳಿಂದ ನಿರಂತರವಾಗಿ ತಯಾರಿ ನಡೆಸುತ್ತಿದ್ದು, ಇದು ಯುಪಿಎಸ್ಸಿ ಮಟ್ಟದ ಸವಾಲಿನ ಪರೀಕ್ಷೆಯಾಗಿದೆ. ಇಂತಹ ಗಂಭೀರ ಪರೀಕ್ಷೆಯನ್ನು ಪಾರದರ್ಶಕವಾಗಿ ಹಾಗೂ ಕಟ್ಟುನಿಟ್ಟಾಗಿ ನಡೆಸಬೇಕಿದ್ದ ಕೇಂದ್ರ ಸರ್ಕಾರ ಪ್ರತೀ ವರ್ಷ ಒಂದಲ್ಲೊಂದು ಗೊಂದಲ, ಅಕ್ರಮ ಮತ್ತು ಅವಾಂತರಗಳಿಗೆ ಕಾರಣವಾಗುತ್ತಿದೆ ಎಂದು ಅವರು ದೂರಿದರು. ಪರೀಕ್ಷಾ ಒತ್ತಡದಿಂದ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಗಳೂ ದೇಶದ ಮು ಆದರೂ ಸರ್ಕಾರ ಪರೀಕ್ಷಾ ವ್ಯವಸ್ಥೆಯನ್ನು ಸು ವಿಫಲವಾಗಿದೆ.

ಶ್ರೀಮಂತ ವಿದ್ಯಾರ್ಥಿಗಳ ಹಿತಾಸಕಿಗಾಗಿ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡಲಾಗುತ್ತಿದೆ ಎಂದು ಅವರು ಕಿಡಿಕಾರಿದರು. ನೀಟ್ ಪರೀಕ್ಷೆ ಆರಂಭವಾದ ಬಳಿಕ ಕೋಚಿಂಗ್ ಸೆಂಟರ್‌ಗಳ ಹಾವಳಿ ಹೆಚ್ಚಾಗಿದ್ದು, ಪರೀಕ್ಷೆಯನ್ನೇ ಖರೀದಿ ಮಾಡುವ ಮಟ್ಟಕ್ಕೆ ವ್ಯವಸ್ಥೆ ಕುಸಿದಿರುವುದು ದುರಂತಕರ ಸಂಗತಿಯಾಗಿದೆ. ವೈದ್ಯಕೀಯ ಸೀಟುಗಳು ಬಡವರ ಮಕ್ಕಳ ಪಾಲಿಗೆ ಕನಸಾಗುತ್ತಿವೆ ಎಂದು ಹೇಳಿದರು. ಮೇ 3ರಂದು ಪರೀಕ್ಷೆ ಬರೆದು ನೆಮ್ಮದಿ ಕಂಡಿದ್ದ ವಿದ್ಯಾರ್ಥಿಗಳಿಗೆ ಈಗ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದ ಹಿನ್ನೆಲೆ ಪರೀಕ್ಷೆ ರದ್ದಾದ ಸುದ್ದಿ ಆಘಾತ ಉಂಟುಮಾಡಿದೆ.

ದೂರದ ಪರೀಕ್ಷಾ ಕೇಂದ್ರಗಳಿಗೆ ಮತ್ತೆ ತೆರಳಬೇಕಾಗಿರುವುದರಿಂದ ವಿದ್ಯಾರ್ಥಿಗಳು ಹಾಗೂ ಪೋಷಕರು ಅನಗತ್ಯ ಆರ್ಥಿಕ ಹೊರೆ ಅನುಭವಿಸುವಂತಾಗಿದೆ. ಕೇಂದ್ರ ಸರ್ಕಾರ ನಡೆಸುತ್ತಿರುವ ನೀಟ್ ಪರೀಕ್ಷೆಯ ಮೇಲಿನ ಜನರ ವಿನ್ಯಾಸ ಕುಸಿಯುತ್ತಿದೆ ಎಂದು ಅವರು ಆತಂಕ ಗಡಿಸಿದರು. 2026ರ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಮೇಲ್ವಿಚಾರಣೆಯಲ್ಲಿ ಸಮಗ್ರ ತನಿಖೆಗೆ ಒಳಪಡಿಸಬೇಕು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಹಾಗೂ ಭಾಗಿಯಾದ ಕೋಚಿಂಗ್ ಸೆಂಟರ್‌ಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಭಾಗಿಯಾಗಿರುವ ಅಥವಾ ಫಲಾನುಭವಿಗಳು ಆಗಿರುವ ವಿದ್ಯಾರ್ಥಿಗಳು ಮತ್ತು ಅವರ ಪಾಲಕರ ಮೇಲೂ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಡಾ. ರಝಾಕ ಉಸ್ತಾದ ಒತ್ತಾಯಿಸಿದರು.

## ಪಾಮನಕಲ್ಲೂರು: ಕಳಪೆ ಚೆಕ್ ಡ್ಯಾಂ ಕಾಮಗಾರಿ: ಅಧಿಕಾರಿಗಳ ನಿರ್ಲಕ್ಷ್ಯ, ರೈತರ ಆಕ್ರೋಶ



ನೈಜ್ಯ ದೆಸೆ ನ್ಯೂಸ್

**ರೈತರ ಹಿತದೃಷ್ಟಿಯಿಂದ ನಿರ್ಮಾಣವಾಗಬೇಕಾದ ಜಲಮೂಲಗಳು ಇಂದು ಗುತ್ತಿಗೆದಾರರ ಪಾಲಿನ 'ಕಾಂಚಾಣ'ವಾಗಿ ಮಾರ್ಪಟ್ಟಿವೆ. ಕವಿತಾಳ ಸಮೀಪದ ಪಾಮನಕಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಚೆಕ್ ಡ್ಯಾಂ ಕಾಮಗಾರಿ ಸಂಪೂರ್ಣ ಕಳಪೆಯಿಂದ ಕೂಡಿದ್ದು, ಸಾರ್ವಜನಿಕರ ಹಣ ನೀರಿನಲ್ಲಿ ಹೋಮ ಮಾಡಿದಂತಾಗಿದೆ ಎಂದು ಸ್ಥಳೀಯ ರೈತರು ಕಿಡಿಕಾರಿದ್ದಾರೆ.**

ಬಾರದ ಪ್ರಯೋಜನ, ವ್ಯರ್ಥವಾದ ಅನುದಾನ: ರೈತರ ಜಮೀನುಗಳಿಗೆ ನೀರುಣಿಸಲು ಹಾಗೂ ಅಂತರ್ಜಲ ವೃದ್ಧಿಸಲು ಸರ್ಕಾರ ಲಕ್ಷಾಂತರ



ರೂಪಾಯಿ ಖರ್ಚು ಮಾಡಿ ಚೆಕ್ ಡ್ಯಾಂ ನಿರ್ಮಿಸುತ್ತಿದೆ. ಆದರೆ, ಪಾಮನಕಲ್ಲೂರು ಹೊರವಲಯದಲ್ಲಿ ನಡೆಯುತ್ತಿರುವ ಈ ಕಾಮಗಾರಿಯಲ್ಲಿ ಗುಣಮಟ್ಟದ ಕಿಂಚಿತ್ತೂ ಸುಳಿವಿಲ್ಲ. ಸಿಮೆಂಟ್ ಪ್ರಮಾಣ ಕಡಿಮೆ ಬಳಸಿ, ಕಳಪೆ ಗುಣಮಟ್ಟದ ಕಲ್ಲು ಮತ್ತು ಮರಳನ್ನು ಉಪಯೋಗಿಸಲಾಗುತ್ತಿದೆ ಎಂಬ ದೂರುಗಳು ಕೇಳಿಬಂದಿವೆ. ರೈತರ ಆಕ್ಷೇಪ: "ಇದು ರೈತರಿಗಾಗಿ ಮಾಡುತ್ತಿರುವ ಕೆಲಸವೋ ಅಥವಾ ಗುತ್ತಿಗೆದಾರರ ಜೇಬು ತುಂಬಿಸಲು ಮಾಡುತ್ತಿರುವ ನಾಟಕವೋ ತಿಳಿಯುತ್ತಿಲ್ಲ.

**(ಸಂಬಂಧಪಟ್ಟ ಇಲಾಖೆಯ ಎಂಜಿನಿಯರ್‌ಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸದೆ, ಕಚೇರಿಯಲ್ಲೇ ಕುಳಿತು ಬಿಲ್ ಪಾಸು ಮಾಡುತ್ತಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ. ಕೂಡಲೇ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ಸ್ಥಗಿತಗೊಳಿಸಿ, ಗುಣಮಟ್ಟದ ತನಿಖೆ ನಡೆಸಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು.)**

ಈ ಕಾಮಗಾರಿಯಿಂದ ರೈತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಮೊದಲ ಮಳೆಗೇ ಈ ಡ್ಯಾಂ ಕೊಚ್ಚಿಹೋಗುವ ಲಕ್ಷಣಗಳು ಕಾಣುತ್ತಿವೆ" ಎಂದು ಸ್ಥಳೀಯ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದೇಶ ನಗನೂರ್. ಹೋರಾಟ ಗಾರರು "ಸಂಬಂಧ ಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸುತ್ತಿಲ್ಲ. ಕಣ್ಣೆದುರೇ ಕಳಪೆ ಕೆಲಸ ನಡೆಯುತ್ತಿದ್ದರೂ ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ. ಇದು ನಿಲ್ಲಬೇಕು."

## ಗೊರೇಬಾಳ ಗ್ರಾ.ಪಂಗೆ ಸಾಮಾಜಿಕ ಪರಿಶೋಧನಾ ನಿರ್ದೇಶಕ ಸಿ.ಮಲ್ಲಪ್ಪ ಭೇಟಿ ದಾಖಲಾತಿ ಕಾಮಗಾರಿ ವೀಕ್ಷಣೆ

ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಗೊರೇಬಾಳ ಗ್ರಾ.ಪಂಗೆ ಸಾಮಾಜಿಕ ಪರಿಶೋಧನಾ ನಿರ್ದೇಶಕ ಸಿ.ಮಲ್ಲಪ್ಪ ಭೇಟಿ ನೀಡಿ ಮಹಾತ್ಮಗಾಂಧಿ ನರೇಗಾ, 15ನೇ ಹಣಕಾಸು, ರಾಜ್ಯ ಹಣಕಾಸು ಆಯೋಗ, ಸಮಗ್ರ ಶಿಕ್ಷಣ, ಮಧ್ಯಾಹ್ನ ಬಿಸಿ ಊಟದ ಯೋಜನೆಗಳ ಅನುದಾನದ ವಹಿಗಳ ನಿರ್ವಹಣೆ, ದಾಖಲಾತಿಗಳ ಪರಿಶೀಲನೆ, ಕಾಮಗಾರಿ ವೀಕ್ಷಣೆ ಮಾಡಿ, ಯೋಜನೆಗಳನ್ನು ಪಾರದರ್ಶಕವಾದ ಅನುಷ್ಠಾನದ ಕುರಿತು ಚರ್ಚೆ ನಡೆಸಿ ಮಾರ್ಗದರ್ಶನ ನೀಡಲಾಯಿತು.**



ಈ ಸಂದರ್ಭದಲ್ಲಿ: ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ, ಗ್ರಾಮೀಣ ಉದ್ಯೋಗದ ಸಹಾಯಕ ನಿರ್ದೇಶಕ ಯಂಕಪ್ಪ , ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಾಶ, ಐಇಸಿ ಸಂಯೋಜಕ ಥಾಮಸ್, ಪಿಡಿಒ ನಿಂಗಪ್ಪ ತಾಂತ್ರಿಕ ಸಹಾಯಕ ಪರ್ವತರೆಡ್ಡಿ, ಸತ್ಯನಾರಾಯಣ, ಗ್ರಾ.ಪಂ.ಸಿಬ್ಬಂದಿಗಳು ರಾಯಚೂರು ಜಿಲ್ಲಾ ಸಾಮಾಜಿಕ ಪರಿಶೋಧನಾ ಜಿಲ್ಲಾ ಮತ್ತು ತಾಲೂಕು ಸಂಪನ್ಮೂಲ ವ್ಯಕ್ತಿಗಳು ಹಾಗೂ ಗ್ರಾಮ ಸಂಪನ್ಮೂಲ ವ್ಯಕ್ತಿಗಳು ಹಾಜರಿದ್ದರು.

## ಹಿಂದು ವಿದ್ಯಾರ್ಥಿಗಳ ಮೇಲೆ ಮೇಲೆ ಸರಕಾರ ಮಲತಾಯಿ ಧೋರಣೆ

ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಜಿಲ್ಲೆಯ ಸುರಪುರ ತಾಲೂಕಿನ ಅಡ್ವಕೇಟ್ ಆಗಿರುವ ತಕ್ಕಂತ ವೆಂಕಟೇಶ್ ಬೊಮ್ಮನಹಳ್ಳಿ ಅವರು ಸರಕಾರದ ವಿರುದ್ಧ ಆಕ್ರೋಶಬರಿತವಾಗಿ ಮಾತನಾಡಿದರು. ಸರಕಾರ ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಒಂದು ನ್ಯಾಯ. ಹಿಂದೂ ವಿದ್ಯಾರ್ಥಿಗಳಿಗೆ ಒಂದು ನ್ಯಾಯ. ಇದು ಯಾವ ತರ ಅನ್ನುವುದೇ ಗೊತ್ತಾಗುತ್ತಿಲ್ಲ ಅಂತ ಹೇಳಿ ಕೇಳಿದರು.**




ಸರ್ಕಾರ ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಈಜಾಬ್ ಧರಿಸಲು ಯಾವ ರೀತಿ ಅವಕಾಶ ಕೊಟ್ಟಿದ್ದೀರಿ. ಅದೇ ರೀತಿ ಇಂದು ವಿದ್ಯಾರ್ಥಿಗಳಿಗೆ ಕೇಸರಿಯ ಬಟ್ಟೆಗಳನ್ನು ಹಾಕಿಕೊಂಡು ಕಾಲೇಜುಗಳಿಗೆ ಮತ್ತು ಶಾಲೆಗಳಿಗೆ ತೆರಳಲು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಮಂತ್ರಿಗಳು ಕೂಡಲೇ ಎಚ್ಚೆತ್ತುಕೊಂಡು ಈ ವಿಚಾರದ ಬಗ್ಗೆ ಗಮನ ಹರಿಸಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸ ಮಾಡಬೇಕೆಂದು ಹೇಳಿದರು. ಇಲ್ಲದಿದ್ದರೆ ಮುಂದಿನ ದಿನಮಾನಗಳಲ್ಲಿ ಸರಕಾರಕ್ಕೆ ತಕ್ಕ ಪಾಠ ಕಲ್ಪಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದರು. ಒಂದು ವೇಳೆ ಸರ್ಕಾರ ಮಲತಾಯಿ ಧೋರಣೆ ತೋರಿದರೆ ಉಗ್ರ ಹೋರಾಟ ಮಾಡಲಾಗುವುದೆಂದು ಎಚ್ಚರಿಸಿದರು.

## ಹೋಟೆಲ್ ನಲ್ಲಿ ಹೈದರಾಬಾದ್ ವ್ಯಕ್ತಿ ಅನುಮಾನ ಆಸ್ಪದವಾಗಿ ಸಾವು


ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಹೋಟೆಲ್ ನಲ್ಲಿ ವ್ಯಕ್ತಿ ಅನುಮಾನ್ ಆಸ್ಪದ ಸಾವು. ಅಕ್ಕ ಮತ್ತು ಭಾವನಿಂದ ಕೊಲೆಯ ಸಂಶ್ಯೆ?. ಯಾದಗಿರಿಯ ಖಾಸಗಿ ಹೋಟೆಲ್ ನಲ್ಲಿ ವಾಸ್ತವ ಹೂಡಿದ ಹೈದರಾಬಾದ್ ಮೂಲದ ವ್ಯಕ್ತಿಯೊಬ್ಬರು ಅರೆಬರೆಯ ಬಟ್ಟೆಯಲ್ಲಿ ಮೃತದೇಹವಾಗಿ ಪತ್ತೆಯಾಗಿರುವ ಘಟನೆ ಬುಧವಾರ ರಾತ್ರಿ 8 ಗಂಟೆಗೆ ಬೆಳಕಿಗೆ ಬಂದಿದೆ.**

ಈ ಸಾವು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದು. ಪ್ರಾಥಮಿಕ ತನಿಕೆಯಲ್ಲಿ ಕೊಲೆ ಎಂದು ಶಂಕೆ ವ್ಯಕ್ತವಾಗಿದೆ. ಹೈದರಾಬಾದಿನ ವಿನಾಯಕ ನಗರ ನಿವಾಸಿ ಲಕ್ಷ್ಮಣ್ ರಾವ್ (51) ಮೃತಪಟ್ಟವರು. ಇವರು ಮೂರು ದಿನಗಳ ಹಿಂದೆ ತಮ್ಮ ಅಕ್ಕ ಸಜ್ಜೆ ವರಲಕ್ಷ್ಮಿ ಮತ್ತು ಭಾವ ಸಜ್ಜೆ ವೆಂಕಟರತ್ನ ಅವರೊಂದಿಗೆ ಯಾದಗಿರಿ ಹೋಟೆಲಿಗೆ ಬಂದು ವಾಸ್ತವ ಮಾಡಿದ್ದರು. ಮಂಗಳವಾರ ಸಂಜೆ ಅಕ್ಕ ಮತ್ತು ಭಾವ ಹೊರಗಡೆ ಹೋದವರು ಮರಳಿ ಹೋಟೆಲಿಗೆ ಬಂದಿಲ್ ಎನ್ನಲಾಗಿದೆ. ಬುಧವಾರ ರಾತ್ರಿ ಹೋಟೆಲ್



ಸಿಬ್ಬಂದಿಗಳು ಗಮನಸಿದಾಗ ಲಕ್ಷ್ಮಣ್ ರಾವ್ ಸಾವನಪ್ಪಿದ್ದಾನೆ ಎನ್ನುವುದು ಗೊತ್ತಾಗಿದೆ. ತಕ್ಷಣ ಹೋಟೆಲ್ ಸಿಬ್ಬಂದಿಗಳು ಎಚ್ಚೆತ್ತುಕೊಂಡು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.




ಸ್ಥಳಕ್ಕೆ ಪೊಲೀಸರ ಆಗಮಿಸಿ. ಪರಿಶೀಲನೆ ನಡೆಸಿದ್ದು. ಮೃತನ ಕುತ್ತಿಗೆಗೆ ಟವೆಲ್ ಮತ್ತು ತಲೆ ದಿಂಬಿನಿಂದ ಉಸಿರೇ ಗಟ್ಟಿಸಿ ಕೊಲೆ ಮಾಡಿರುವ ಲಕ್ಷಣ ಕಂಡು ಬಂದಿರುತ್ತದೆ ಎಂದು ಪೊಲೀಸರು ಹೇಳಿದರು. ಈ ಘಟನೆಯ ಕುರಿತು ಯಾದಗಿರಿ ಎಸ್ ಪಿ ಪೃಥ್ವಿ ಶಂಕರ್ ಅವರು ಮಾತನಾಡಿ. ಇನ್ನು ಪ್ರಗತಿ ತನಿಕೆ ಎಲ್ಲಿದೆ ಎಂದು ತಿಳಿಸಿದರು. ತಲೆ ಮರ್ಸಿಕೊಂಡಿರುವ ಅಕ್ಕ ಮತ್ತು ಭಾವನೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

## "ಬ್ಯಾರಲಗಳಿಗೆ ಗರಿಷ್ಠ ಇಂಧನ ತುಂಬದಂತೆ ಪೆಟ್ರೋಲ್ ಬಂಕ್‌ಗಳಿಗೆ ಪೊಲೀಸರ ಸೂಚನೆ"



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಇಂಧನ ಕಡಿಮೆ ಬಳಸಿ, ಬಂಗಾರ ಖರೀದಿ ಒಂದು ವರ್ಷ ಮುಂದೂಡಿ ಎಂದು ಕರೆ ನೀಡಿದ ಹಿನ್ನೆಲೆಯಲ್ಲಿ ಬ್ಯಾರಲ್‌ಗಳಿಗೆ ಹೆಚ್ಚಿನ ಇಂಧನ ತುಂಬದಂತೆ ಪೊಲೀಸ್ ಇಲಾಖೆ ಪೆಟ್ರೋಲ್ ಬಂಕ್‌ಗಳ ಮಾಲೀಕರಿಗೆ ಸೂಚನೆ ನೀಡಿದೆ.**

ಪೊಲೀಸ್ ಠಾಣೆಯಲ್ಲಿ ಮಂಗಳವಾರ ಬಂಕ್ ಮಾಲೀಕರ ಸಭೆ ನಡೆಸಿದ ಪಿಎಸ್‌ಐ ರಂಗಯ್ಯ ಕೆ., 200 ಲೀಟರ್ ಒಳಗೆ ಇಂಧನ ತುಂಬಬೇಕು. ಬ್ಯಾರಲ್, ಟ್ಯಾಂಕರ್‌ಗಳಿಗೆ ತುಂಬಬಾರದು' ಎನ್ನುವುದೂ ಸೇರಿದಂತೆ ಆರು ಅಂಶಗಳನ್ನು ತಿಳಿಸಿದರು. 'ಇಂಧನ ದಾಸ್ತಾನು ಇಟ್ಟುಕೊಂಡು, ಕೃತಕ ಅಭಾವ ಸೃಷ್ಟಿಸಿದರೆ, ಅಂತವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ. ಈ ವೇಳೆ ತಾಲೂಕಿನ ವಿವಿಧ ಪೆಟ್ರೋಲ್ ಬಂಕ್‌ಗಳ ಮಾಲೀಕರು ಪಾಲ್ಗೊಂಡಿದ್ದರು.

ವರ್ಚುವಲ್ ಸಭೆ: ನೌಕರರು ಸರ್ಕಾರಿ ವಾಹನಗಳನ್ನು ಹೆಚ್ಚಿಗೆ ಬಳಸದೆ, ಇಂಧನ ಉಳಿಸಲು ಮುಂದಾಗಬೇಕು ಎಂಬ ಕರೆಯ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಮಂಗಳವಾರದಿಂದಲೇ ವರ್ಚುವಲ್ ಸಭೆ ನಡೆಸಲು ತೀರ್ಮಾನಿಸಿದೆ. ಸಭೆಗಳ ಕಾರಣಕ್ಕೆ ರಾಯಚೂರು ಹಾಗೂ ಲಿಂಗಸುಗೂರಿಗೆ ತೆರಳುತ್ತಿದ್ದ ಸಿಪಿಐ ಹಾಗೂ ಪಿಎಸ್‌ಐಗಳು ಇದೀಗ ವರ್ಚುವಲ್ ಸಭೆ ನಡೆಸುವ ಮೂಲಕ ಇಂಧನ ಉಳಿಸಲು ಮುಂದಾಗಿದ್ದಾರೆ.

## ಮಕ್ಕಳ ಜನನ ಮಧ್ಯ ಕನಿಷ್ಠ ಮೂರು ವರ್ಷಗಳ ಅಂತರ ಕಾಪಾಡಲು ಸರಳ, ಸುಲಭ ವಿಧಾನ 'ಅಂತರ' ತಾತ್ಕಾಲಿಕ ಗರ್ಭನಿರೋಧಕ ಚುಚ್ಚುಮದ್ದು ಉಚಿತವಾಗಿ ಲಭ್ಯ.

ನೈಜ್ಯ ದೆಸೆ ನ್ಯೂಸ್

**ಅಂತರ ಎಂಬ ಹೆಸರಿನಿಂದ ಕರೆಯಲ್ಪಡುವ ತಾತ್ಕಾಲಿಕ ಗರ್ಭನಿರೋಧಕ ವಿಧಾನವಾದ "ಅಂತರ ಚುಚ್ಚುಮದ್ದು" ಅತ್ಯಂತ ಸರಳವಾಗಿದ್ದು, ದಂಪತಿಗಳು ತಮ್ಮ ಸೂಕ್ತ ನಿರ್ಧಾರದ ಮೇರೆಗೆ ಮೊದಲ ಹೆರಿಗೆ ನಂತರ ಎರಡನೆಯ ಹೆರಿಗೆಯ ಜನನದ ಅಂತರಕ್ಕಾಗಿ "ಅಂತರ ಚುಚ್ಚುಮದ್ದು" ನ್ನು ಉಚಿತವಾಗಿ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ವಿಭಾಗದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್ ತಿಳಿಸಿದರು.**

ರಾಯಚೂರು ನಗರದ ಎಲ್‌ಬಿಎಸ್ ನಗರದ ನೀರಿನ ಟ್ಯಾಂಕ್ ಹತ್ತಿರದಲ್ಲಿ ಜರುಗಿದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ತಾಯಂದಿರಿಗೆ ಆರೋಗ್ಯ ಶಿಕ್ಷಣ ನೀಡುತ್ತಾ, ಮಾತನಾಡಿ ಮದುವೆ




ನಂತರ ಮೊದಲ ಮಗುವಿನ ಜನನದ ನಂತರ ದಂಪತಿಗಳು ತಾಯಿ ಮಗುವಿನ ಆರೋಗ್ಯ ದೃಷ್ಟಿಯಿಂದ ಎರಡನೆಯ ಮಗುವಿನ ಜನನವು ಕನಿಷ್ಠ 3 ವರ್ಷಗಳ ನಂತರ ಇರಲಿ ಎಂದು ನಿರ್ಧರಿಸಿದಾಗ, ಒಂದು ಡೋಸ್ ಮೂಲಕ ಮೂರು ತಿಂಗಳವರೆಗೆ ಗರ್ಭಧಾರಣೆಯನ್ನು ತಡೆಯುವ ಅಂತರ ಚುಚ್ಚುಮದ್ದು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿದ್ದು ಇದರ ಸದುಪಯೋಗಕ್ಕಾಗಿ ವಿನಂತಿಸಿದರು.

ಭವಿಷ್ಯದಲ್ಲಿ ಗರ್ಭಕಂಠದ



ಕ್ಯಾನ್ಸರ್ ತಡೆಗೆ ಲಸಿಕೆ ಹಾಕಿಸಿ ವೈದ್ಯರು ನಿರ್ಧರಿಸುವ ರೋಗಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ತಾವೇ ವೈದ್ಯರಂತೆ ಬಿಂಬಿಸಿಕೊಂಡು ತಪ್ಪು ಮಾಹಿತಿ ನೀಡುವುದನ್ನು ನಂಬದೆ, ದಯವಿಟ್ಟು ನಮ್ಮ ಕುಟುಂಬದ ಹೆಣ್ಣು ಮಕ್ಕಳನ್ನು ಭವಿಷ್ಯದಲ್ಲಿ ಗರ್ಭಕಂಠದ ಕ್ಯಾನ್ಸರ್‌ನಿಂದ ಮುಕ್ತಗೊಳಿಸಲು ನೆಮ್ಮದಿಯ ಜೀವನ ನಡೆಸಲು ಪ್ರಸ್ತುತ ಸರಕಾರ ಮಾರ್ಗಸೂಚಿಯಂತೆ 14 ವರ್ಷದ ಹೆಣ್ಣು ಮಕ್ಕಳಿಗೆ ಹಾಕಲಾಗುವ ಹೆಚ್.ಪಿ.ವಿ ಲಸಿಕೆಯನ್ನು ಪಾಲಕರು ಯಾವುದೆ ಹಿಂದೇಟು ಹಾಕದೆ ಉಚಿತವಾಗಿ ಹಾಕಿಸಿ ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ ವಿನಂತಿಸಿದರು.

ಈ ಸಂದರ್ಭದಲ್ಲಿ ಮಕ್ಕಳಿಗೆ ಹಾಕುವ ಲಸಿಕೆಗಳ ಮಹತ್ವ, ಬೇಸಿಗೆ ಮುಂಜಾಗೃತೆ, ND-ರ್‌ಎಸ್ ಬಳಕೆ, ಕೈ ತೊಳೆಯುವ ವಿಧಾನ, ಡೆಂಗ್ಯು ತಡೆಯುವ ವಿಧಾನ, ಮಿಷನ್ ಏಡ್ಸ್ ಸರಕ್ಷತಾ ಅಭಿಯಾನ, 100 ದಿನಗಳ ಕ್ಷಯರೋಗ ಪತ್ತೆ ಹಚ್ಚುವ ಅಭಿಯಾನ ಕುರಿತು ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಪಿಹೆಚ್‌ಸಿಓ ವಸಂತಕುಮಾರಿ, ಆಶಾ ಕಾರ್ಯಕರ್ತೆ ವಿಜಯಲಕ್ಷ್ಮೀ, ಅಂಗನವಾಡಿ ಕಾರ್ಯಕರ್ತೆ ಕೆ ರೆಹೆನಾ, ಸಾದೀಕ್ ಸೇರಿದಂತೆ ತಾಯಂದಿರು, ಸಾರ್ವಜನಿಕರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

ಭಾರತೀಯ ಸೇನಾ ನೇಮಕಾತಿ 2026 ? 30 ತಾಂತ್ರಿಕ ಪದವಿ ಕೋರ್ಸ್ (TGC-144) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 14, 2026 ಭಾರತೀಯ ಸೇನಾ ನೇಮಕಾತಿ 2026: 30 ತಾಂತ್ರಿಕ ಪದವಿ ಕೋರ್ಸ್ (TGC-144) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ಸೇನೆಯ ಅಧಿಕೃತ ಅಧಿಸೂಚನೆಯ ಮೂಲಕ ತಾಂತ್ರಿಕ ಪದವಿ ಕೋರ್ಸ್ (TGC-144) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 11–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 13–05–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11–ಜೂನ್–2026 ಅಧಿಕೃತ ವೆಬ್‌ಸೈಟ್: joinindianarmy.nic.in

## ಎರಡು ತಿಂಗಳಾದರೂ ಕನ್ನಡ ನಾಮಫಲಕ ನಿಯಮ ಜಾರಿ ಇಲ್ಲ: ಅಧಿಕಾರಿಗಳ ವಿರುದ್ಧ ಆಕ್ರೋಶ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದಲ್ಲಿ ಅಂಗಡಿ ನಾಮಫಲಕಗಳಲ್ಲಿ ಕನ್ನಡಕ್ಕೆ ಮೊದಲ ಸ್ಥಾನ ನೀಡುವಂತೆ ಕರ್ನಾಟಕ ವೀರ ಸಮರ ಸಂಘದಿಂದ ಎರಡು ತಿಂಗಳ ಹಿಂದೆಯೇ ತಾಲೂಕ ಆಡಳಿತ ಹಾಗೂ ಪುರಸಭೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ, ಇದುವರೆಗೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವುದಕ್ಕೆ ಸಂಘದ ತಾಲೂಕ ಅಧ್ಯಕ್ಷ ಮಲ್ಲನಗೌಡ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.**



ಕರ್ನಾಟಕ ಸರ್ಕಾರವು ಕನ್ನಡವನ್ನು ಆಡಳಿತ ಭಾಷೆಯಾಗಿ ಘೋಷಿಸಿ, ಎಲ್ಲಾ ವ್ಯಾಪಾರ ವಹಿವಾಟುಗಳ ನಾಮಫಲಕಗಳಲ್ಲಿ ಕನ್ನಡಕ್ಕೆ ಮೊದಲ ಸ್ಥಾನ ಕಡ್ಡಾಯಗೊಳಿಸಿ ಸ್ಪಷ್ಟ ಸುತ್ತೋಲೆ ಹೊರಡಿಸಿದೆ. ಆದರೆ ಮಾನ್ವಿ ಪಟ್ಟಣದಲ್ಲಿ ಇನ್ನೂ ಅನೇಕ ಅಂಗಡಿ, ಹೋಟೆಲ್, ವಾಣಿಜ್ಯ ಮಳಿಗೆಗಳು ಹಾಗೂ ವಿವಿಧ ಉದ್ಯಮಗಳ ನಾಮಫಲಕಗಳಲ್ಲಿ ಆಂಗ್ಲ ಮತ್ತು ತೆಲುಗು ಭಾಷೆಗಳನ್ನು ದೊಡ್ಡ ಅಕ್ಷರಗಳಲ್ಲಿ ಬರೆದು, ಕನ್ನಡವನ್ನು ಕೇವಲ ಚಿಕ್ಕ ಅಕ್ಷರಗಳಲ್ಲಿ ತೋರಿಸಲಾಗುತ್ತಿದೆ. ಇದು ಕನ್ನಡ ಭಾಷೆಗೆ ಹಾಗೂ ಕನ್ನಡಿಗರ ಸ್ವಾಭಿಮಾನಕ್ಕೆ ಮಾಡಿದ ಅವಮಾನವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಈಗಾಗಲೇ ಹಲವಾರು ಬಾರಿ ಪುರಸಭೆ ಕಚೇರಿಗೆ ಭೇಟಿ ನೀಡಿ ಅಧಿಕಾ–ರಿಗಳ ಗಮನಕ್ಕೆ ತಂದಿದ್ದರೂ, "ನೋಟಿಸ್ ಕಳಿಸಿದ್ದೇವೆ", "ಕ್ರಮ ಕೈಗೊಳ್ಳಲಾಗುತ್ತದೆ" ಎಂಬ ಮಾತುಗಳನ್ನಷ್ಟೇ ಹೇಳಲಾಗುತ್ತಿದೆ ಹೊರತು, ಸ್ಥಳ ಪರಿಶೀಲನೆ ಮಾಡಿ ಕಠಿಣ ಕ್ರಮ ಕೈಗೊಳ್ಳುವ ಮನಸ್ಸು ಅಧಿಕಾರಿಗಳಲ್ಲಿ ಕಾಣಿಸುತ್ತಿಲ್ಲ ಎಂದು ಆರೋಪಿಸಿದರು. ಎರಡು ತಿಂಗಳು ಕಳೆದರೂ ಕೇವಲ ಎರಡು ಅಥವಾ ಮೂರು ಕಡೆಗಳಲ್ಲಿ ಮಾತ್ರ ನಾಮಫಲಕ ಬದಲಾವಣೆ ಆಗಿದ್ದು, ಉಳಿದ ಕಡೆಗಳಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ. ಇದು ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಕನ್ನಡ ವಿರೋಧಿ ಮನೋಭಾವಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಕನ್ನಡಕ್ಕೆ ಮೊದಲ ಸ್ಥಾನ ನೀಡದ ವ್ಯಾಪಾರಸ್ಥರ ವಿರುದ್ಧ ತಕ್ಷಣ ದಂಡ ವಿಧಿಸಬೇಕು, ನಿಯಮ ಉಲ್ಲಂಘಿಸಿರುವ ನಾಮಫಲಕಗಳನ್ನು ಜಪ್ತಿ ಮಾಡಬೇಕು ಹಾಗೂ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಒಂದು ವೇಳೆ ತಾಲೂಕ ಆಡಳಿತ ಹಾಗೂ ಪುರಸಭೆ ಅಧಿಕಾರಿಗಳು ಇದೇ ರೀತಿ ನಿರ್ಲಕ್ಷ್ಯ ಮುಂದುವರಿಸಿದರೆ, ಕರ್ನಾಟಕ ವೀರ ಸಮರ ಸಂಘದ ವತಿಯಿಂದ ತಹಶೀಲ್ದಾರ್ ಕಚೇರಿ ಹಾಗೂ ಪುರಸಭೆ ಎದುರು ಉಗ್ರ ಪ್ರತಿಭಟನೆ, ಸತ್ಯಾಗ್ರಹ ಹಾಗೂ ಹೋರಾಟ ಹಮ್ಮಿಕೊಳ್ಳಲಾಗುವುದು. ಕನ್ನಡದ ಗೌರವ ಉಳಿಸಲು ಯಾವುದೇ ಮಟ್ಟದ ಹೋರಾಟಕ್ಕೂ ನಾವು ಸಿದ್ಧರಾಗಿದ್ದೇವೆ ಎಂದು ತಾಲೂಕ ಅಧ್ಯಕ್ಷ ಮಲ್ಲನಗೌಡ ಎಚ್ಚರಿಕೆ ನೀಡಿದರು.

## ಬಳ್ಳಾರಿ/ ವಿಬಿ ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ಪ್ರತಿಭಟನೆಯ ಪ್ರಚಾರ ಅಭಿಯಾನ

ನೈಜ್ಯ ದೆಸೆ ನ್ಯೂಸ್

**ವಿಬಿ ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ಹಾಗೂ ಪ್ರತಿ ಕುಟುಂಬಕ್ಕೂ 200 ದಿನ ಕೆಲಸ 600 ಕೂಲಿಗಾಗಿ ಆಗ್ರಹಿಸಿ ಂಖಿಏಏಒಖ (ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ) ವತಿಯಿಂದ ಇದೇ ತಿಂಗಳು 15 ಮೇ 2026ರಂದು ಬೆಳಿಗ್ಗೆ 10.30 ಕ್ಕೆ ಬಳ್ಳಾರಿ ತಾಲೂಕು ಪಂಚಾಯತಿ ಮುಂದುಗಡೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ, ಇದರ ಅಂಗವಾಗಿ ಬಳ್ಳಾರಿ ತಾಲೂಕಿನ ಕರ್ಚೇಡು ಗ್ರಾಮದಲ್ಲಿ ಪ್ರಚಾರವನ್ನು ಮಾಡಲಾಯಿತು.**




ಈ ಸಂದರ್ಭದಲ್ಲಿ AIKKMS ಸಂಘದ ಜಿಲ್ಲಾ ಅಧ್ಯಕ್ಷ ಗೋವಿಂದ್ ಮಾತನಾಡುತ್ತಾ ವಿ ಬಿ ಜಿ ರಾಮ್ ಜಿ ಯೋಜನೆ ಜಾ–ರಿಯಿಂದ ಕೂಲಿಕಾರ್ಮಿಕರ ಉದ್ಯೋಗ ಕಸಿದುಕೊಂಡಿದೆ, 125 ದಿನ ಕೆಲಸ ನೀಡುತ್ತೇವೆ ಎಂದು ಹೇಳುತ್ತಿದ್ದಾರೆ, ಆದರೆ ಅದಕ್ಕೆ ಬೇಕಾದ ಹಣ ಒದಗಿಸುವಲ್ಲಿ, ಹಿಂದೆ ಸರಿದಿದ್ದಾರೆ, ಕೆಲಸ ನೀಡುವಲ್ಲಿ ಮೊದಲು ಪಂಚಾಯಿತಿಗೆ ಇದ್ದ ಅಧಿಕಾರವನ್ನು ಈಗ ಕಿತ್ತುಕೊಳ್ಳಲಾಗಿದೆ. ಶೆ.60ರಷ್ಟು ಹಣ ಕೇಂದ್ರ ಸರ್ಕಾರ, 40 ರಷ್ಟು ರಾಜ್ಯ ಸರ್ಕಾರ ಕೊಡಬೇಕು ಎಂದು ಹೇಳಿದ್ದಾರೆ, ಆದರೆ ಕಾಯ್ದೆ ತಿದ್ದುಪಡಿ ಮಾಡುವಾಗ ಯಾವುದೇ ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ತೆಗೆದುಕೊಳ್ಳದೆ, ಸರ್ವಾಧಿಕಾರಿ ಧೋರಣೆಯಿಂದ ಈ ಕಾಯ್ದೆ ಜಾ–ರಿಗೆ ತರಲಾಗಿದೆ, ಈ ಎಲ್ಲಾ ಅಂಶಗಳಿಂದ ಇದು ಕೂಲಿ ಕಾರ್ಮಿಕರ ವಿರೋಧಿ ನೀತಿಯಾಗಿದೆ. ಇದನ್ನು ನಾವೆಲ್ಲ ಸೇರಿ ವಿರೋಧಿಸಬೇಕು ಎಂದರು. ಈ ಸಂದರ್ಭದಲ್ಲಿ ಉದ್ಯೋಗ ಖಾತ್ರಿ ಕೂಲಿ ಕಾರ್ಮಿಕರಾದ ದಸ್ತಗಿರಿ, ವಸಂತ್, ಸ್ವಾಮಿ ಮಾರಣ್ಣ, ಮರಿ ನಾಗ ಇತರರು ಭಾಗವಹಿಸಿದ್ದರು. ವರದಿ :ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

## "ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ ತಡೆಗಟ್ಟಲು ಮನವಿ"



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲ್ಲೂಕಿನ ಖಾಸಗಿ ಶಾಲಾ–ಕಾಲೇಜುಗಳಲ್ಲಿ ಡೊನೇಷನ್ ಹಾವಳಿ ತಡೆಗಟ್ಟಬೇಕು ಎಂದು ಒತ್ತಾಯಿಸಿ ದಲಿತ ವಿದ್ಯಾರ್ಥಿ ಪರಿಷತ್ತಿನ ಪದಾಧಿಕಾರಿಗಳು ಮಂಗಳವಾರ ಪಟ್ಟಣದಲ್ಲಿ ತಹಶೀಲ್ದಾರ್ ಭೀಮರಾಯ ರಾಮಸಮುದ್ರ ಅವರಿಗೆ ಮನವಿ ಸಲ್ಲಿಸಿದರು.**

ತಾಲ್ಲೂಕಿನಲ್ಲಿ 2026–27ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭಕ್ಕೂ ಮುನ್ನವೇ ಖಾಸಗಿ ಶಾಲಾ ಕಾಲೇಜು ದಾಖಲಾತಿ ದಂಧೆ ಜೋರಾಗಿದೆ. ಖಾಸಗಿ ಶಾಲಾ–ಕಾಲೇಜುಗಳು ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಅಕ್ರಮ ವಂತಿಗೆ ವಸೂಲಿ ಮಾಡುತ್ತಿವೆ. ಮಕ್ಕಳಿಗೆ ನೋಟ್‌ಬುಕ್, ಸಮವಸ್ತ್ರ, ಶೂಗಳನ್ನು ಶಾಲಾ? ಕಾಲೇಜುಗಳಲ್ಲಿಯೇ ಹೆಚ್ಚಿನ ದರಕ್ಕೆ ಖರೀದಿಸುವಂತೆ ಒತ್ತಾಯಿಸಲಾಗುತ್ತಿದೆ. ಶಾಲಾ–ಕಾಲೇಜುಗಳಲ್ಲಿ ಅನಧಿಕೃತ ಕೋಚಿಂಗ್ ಸೆಂಟರ್ ಮೂಲಕ ಜೆಇಇ, ನೀಟ್ ಪರೀಕ್ಷಾ ತರಬೇತಿ ಹೆಸರಿನಲ್ಲಿ ನಿಯಮಬಾಹಿರವಾಗಿ ಹಣ ವಸೂಲಿ ಮಾಡಲಾಗುತ್ತಿದೆ ಎಂದು ದೂರಿದರು.

ಡೊನೇಷನ್ ಹಾವಳಿ ತಡೆಗಟ್ಟಲು ಜಿಲ್ಲಾ ಮಟ್ಟದ ಶೈಕ್ಷಣಿಕ ಪ್ರಾಧಿಕಾರ ರಚಿಸಬೇಕು. ಈ ಪ್ರಾಧಿಕಾರದಲ್ಲಿ ಅಧಿಕಾ–ರಿಗಳ ಜತೆಗೆ ಪೋಷಕರು ಮತ್ತು ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳೂ ಇರಬೇಕು ಎಂದು ಅವರು ಒತ್ತಾಯಿಸಿದರು. ದಲಿತ ವಿದ್ಯಾರ್ಥಿ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಬಂಡೆಗುರು ಕರೇಗುಡ್ಡ, ಪದಾಧಿಕಾರಿಗಳಾದ ಮಹ್ಮದ್ ರಾಜಸಾಬ್, ರಾಜಾಭಕ್ಷ, ಶಿವನಗೌಡ ಬ್ಯಾಗವಾಟ, ಸಕುಮಾರ ನಕ್ಕುಂದಿ ಹಾಗೂ ಅಂಬಣ್ಣ ಕರೆಗುಡ್ಡ ಅವರು ಉಪಸ್ಥಿತರಿದ್ದರು.

## "ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಗಳ ಅಧಿಸೂಚನೆ ರದ್ದುಪಡಿಸಲು ಆಗ್ರಹಿಸಿ ಪ್ರತಿಭಟನೆ"

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಕೇಂದ್ರ ಸರಕಾರ ಜಾರಿಗೊಳಿಸಲು ಮುಂದಾಗಿರುವ ಕಾರ್ಮಿಕ ವಿರೋಧಿ ನಾಲ್ಕು ಕಾರ್ಮಿಕ ಸಂಹಿತೆಗಳ ಅಧಿಸೂಚನೆಯನ್ನು ತಕ್ಷಣವೇ ರದ್ದುಪಡಿಸಬೇಕೆಂದು ಒತ್ತಾಯಿಸಿ ಎಐಸಿಸಿಟಿಯು ನೇತೃತ್ವದಲ್ಲಿ ಮಾನ್ವಿ ಪಟ್ಟಣದ ಬಸವ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾಕಾರರು ಅಧಿಸೂಚನೆಯ ಪ್ರತಿಗಳನ್ನು ದಹಿಸಿ ಕೇಂದ್ರ ಸರಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.**



ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಎಐಸಿಸಿಟಿಯು ಮುಖಂಡ ರಾಜ ಸಾಬ್ ಅವರು, "ಪ್ರಸ್ತುತ ಜಾ–ರಿಯಲ್ಲಿರುವ ಕಾರ್ಮಿಕ ಪರ ಕಾಯ್ದೆಗಳನ್ನು ದುರ್ಬಲಗೊಳಿಸಿ, ಬಂಡವಾಳಶಾಹಿಗಳು ಮತ್ತು ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿಗಾಗಿ ಕೇಂದ್ರದ ಬಿಜೆಪಿ ಸರಕಾರ ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಗಳನ್ನು ಜಾರಿಗೆ ತರಲು ಮುಂದಾಗಿದೆ. ಇದು ದೇಶದ ಕೋಟ್ಯಾಂತರ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುವ ಮರಣ ಶಾಸನವಾಗಿದ್ದು, ಕಾರ್ಮಿಕ ವರ್ಗ ಇದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಐಸಿಸಿಟಿಯು ಕರೆ ನೀಡಿರುವ ಜಿಲ್ಲಾವ್ಯಾಪಿ ಪ್ರತಿಭಟನೆ ಅಂಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಕಾರ್ಮಿಕ ಸಂಘಟನೆಗಳು ಇನ್ನಷ್ಟು ಬಲವಾದ ಹೋರಾಟವನ್ನು ರೂಪಿಸಲಿವೆ ಎಂದು ಮುಖಂಡರು ಎಚ್ಚರಿಸಿದರು. ಘಟನೆಯಲ್ಲಿ ಎಐಸಿಸಿಟಿಯು ಮುಖಂಡರಾದ ರಾಜಸಾಬ್, ಈಶಪ್ಪ ಗೌಡ, ವೆಂಕಟೇಶ್ ಕೋರಿ, ಚಂದು ಸಾಬ್, ಗೋಪಾಲ್ ರಾವ್, ಜಲೀಲ್ ಪಾಶಾ, ಇಮ್ರಾನ್ ಸೇರಿದಂತೆ ನೂರಾರು ಕಾರ್ಮಿಕರು ಭಾಗವಹಿಸಿದ್ದರು.

### 1ನೇ ಪುಟದಿಂದ....

ಸೃಷ್ಟಿಸಿದೆ. ವಿರೋಧ ಪಕ್ಷಗಳಿಗಷ್ಟೇ ಅಲ್ಲದೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಾಗ್ದಾಳಿಗೂ ಕಾರಣವಾಗಿದೆ. ಆದರೆ ಕರ್ನಾಟಕದ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಈವರೆಗೂ ಯಾವುದೇ ನಿರ್ಣಯ ತೆಗೆದುಕೊಳ್ಳದೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ವರ್ತಿಸುತ್ತಿದೆ. ಪಂಚರಾಜ್ಯಗಳ ಚುನಾವಣೆ ಬಳಿಕ ರಾಜಕೀಯ ತೀರ್ಮಾನಗಳನ್ನು ಪೂರ್ಣಗೊಳಿಸಿ, ಕರ್ನಾಟಕ ವಿಚಾರವನ್ನು ಚರ್ಚೆಗೆ ಎತ್ತಿಕೊಳ್ಳುವುದಾಗಿ ವರಿಷ್ಠರು ಹೇಳುತ್ತಾ ಬಂದಿದ್ದರು. ಈಗ ಕೇರಳ ಮುಖ್ಯಮಂತ್ರಿ ಆಯ್ಕೆ ಪೂರ್ಣಗೊಂಡಿರುವುದರಿಂದ ಕರ್ನಾಟಕದತ್ತ ಹೈಕಮಾಂಡ್ ಗಮನ ಹರಿಸಬಹುದು ಎಂಬ ನಿರೀಕ್ಷೆಗಳಿವೆ. ಮೇ 15ರಂದು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ದೆಹಲಿಗೆ ಭೇಟಿ ನೀಡಲಿದ್ದಾರೆ, ನಾಯಕತ್ವದ ವಿವಾದ ಇತ್ಯರ್ಥಗೊಳ್ಳಲಿದೆ ಎಂದು ಹೇಳಲಾಗಿತ್ತು. ಆದರೆ ಸಿದ್ದರಾಮಯ್ಯ ಇದನ್ನು ತಳ್ಳಿಹಾಕಿದ್ದಾರೆ. ಕೇರಳದ ಮಾದರಿಯಲ್ಲೇ ಕರ್ನಾಟಕದಲ್ಲಿ ಸ್ಥಳೀಯ ನಾಯಕತ್ವದ ಜನಪ್ರಿಯತೆಗೆ ಮಣೆ ಹಾಕಿದ್ದರೆ ಸಿದ್ದರಾಮಯ್ಯ ಅವರ ಕುರ್ಚಿ ಬಾಕಿಯಿರುವ ಎರಡು ವರ್ಷಗಳ ಕಾಲ ಗಟ್ಟಿಯಾಗಿರುವ ಸಾಧ್ಯತೆಗಳಿವೆ. ಮೇಲ್ನೋಟದ ಪರಿಸ್ಥಿತಿಯ ಪ್ರಕಾರ ಸದ್ಯಕ್ಕೆ ನಾಯಕತ್ವ ಬದಲಾವಣೆಗೆ ಸಂಬಂಧ ಪಟ್ಟಂತಹ ಮಹತ್ವದ ಬದಲಾವಣೆಗಳು ಕಂಡು ಬರುತ್ತಿಲ್ಲ. ಡಿ.ಕೆ.ಶಿವಕುಮಾರ್ ಅವರು ನಿರಾಶೆಯಿಂದಲೇ ತಿರುಗಾಡುತ್ತಿದ್ದು, ಮೇ 15ರ ಹುಟ್ಟುಹಬ್ಬಕ್ಕೆ ಉನ್ನತ ಹುದ್ದೆಯ ಕೊಡುಗೆ ಸಿಗುವುದು ಅನುಮಾನಾಸ್ಪದವಾಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಡವಳಿಕೆ ಮತ್ತಷ್ಟು ಗೊಂದಲ ಮೂಡಿಸಿದೆ.

## ದೇವದುರ್ಗ ಜೆಸ್ಕಾಂ ಇಲಾಖೆ ನಿರ್ಲಕ್ಷ್ಯ: ಕತ್ತಲಲ್ಲಿ ಹೊಸೂರು ಸಿದ್ದಾಪುರ ಗ್ರಾಮಸ್ಥರು



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಹೊಸೂರು ಸಿದ್ದಾಪುರ ಗ್ರಾಮದ ಪ್ರಮುಖ ಭಾಗಕ್ಕೆ ವಿದ್ಯುತ್ ಪೂರೈಕೆ ಮಾಡುತ್ತಿದ್ದ ಟ್ರಾನ್ಸ್‌ಫಾರ್ಮರ್ ಕೆಟ್ಟು ಹಲವು ದಿನಗಳು ಕಳೆದರೂ ದುರಸ್ತಿ ಕಾರ್ಯ ಕೈಗೊಳ್ಳದ ಹಿನ್ನೆಲೆ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಟ್ರಾನ್ಸ್‌ಫಾರ್ಮರ್ ದೋಷದಿಂದ ಗ್ರಾಮದಲ್ಲಿ ನಿರಂತರ ವಿದ್ಯುತ್ ವ್ಯತ್ಯಯ ಉಂಟಾಗಿ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.**

ದೇವದುರ್ಗ ಜೆಸ್ಕಾಂ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ವಿದ್ಯುತ್ ಇಲ್ಲದೆ ಗ್ರಾಮಸ್ಥರು ರಾತ್ರಿ ವೇಳೆ ಕತ್ತಲಲ್ಲೇ ದಿನ ಕಳೆಯುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ಓದಿಗೆ ತೊಂದರೆ ಅನುಭವಿಸುತ್ತಿದ್ದು, ಸಣ್ಣ ವ್ಯಾಪಾರಸ್ಥರ ವ್ಯಾಪಾರ ಚಟುವಟಿ–ಕೆಗಳಿಗೂ ಭಾರೀ ಹೊಡೆತ ಬಿದ್ದಿದೆ. ಜೊತೆಗೆ ಕುಡಿಯುವ ನೀರಿನ ಪಂಪ್‌ಗಳು ಕಾರ್ಯನಿರ್ವಹಿಸದೇ ನೀರಿನ ಸಮಸ್ಯೆಯೂ ಉಂಟಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ. ಸ್ಥಳೀಯರ ಪ್ರಕಾರ, ಕೆಲವು ದಿನಗಳ ಹಿಂದೆ ಟ್ರಾನ್ಸ್‌ಫಾರ್ಮರ್‌ನಲ್ಲಿ ಭಾರೀ ಶಬ್ದದೊಂದಿಗೆ ದೋಷ ಕಾಣಿಸಿಕೊಂಡು ಬಳಿಕ ಸಂಪೂರ್ಣ ಸ್ಥಗಿತಗೊಂಡಿದೆ.



ತಕ್ಷಣವೇ ವಿದ್ಯುತ್ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದರೂ ಇದುವರೆಗೆ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಆರೋಪಿಸಲಾಗಿದೆ. ಕೆಲ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರೂ ದುರಸ್ತಿ ಕಾರ್ಯ ಆರಂಭವಾಗಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. "ಪ್ರತಿ ಬಾರಿ ಮಳೆ ಬಂದಾಗ ಅಥವಾ ಹೆಚ್ಚು ಲೋಡ್ ಆದಾಗ ಟ್ರಾನ್ಸ್‌ಫಾರ್ಮರ್ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಹಳೆಯ ಟ್ರಾನ್ಸ್‌ಫಾರ್ಮರ್ ಬದಲಿಗೆ ಹೊಸದು ಅಳವಡಿಸಬೇಕೆಂದು ಹಲವು ಬಾರಿ ಮನವಿ ಮಾಡಿದರೂ ಅಧಿಕಾ–ರಿಗಳು ಗಮನ ಹರಿಸುತ್ತಿಲ್ಲ," ಎಂದು ಊರಿನ ಮುಖಂಡ ರಂಗಪ್ಪ ಕಾವಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯದಿಂದ ಮೊಬೈಲ್ ಚಾರ್ಜ್ ಮಾಡಿಕೊಳ್ಳಲು, ಅಂಗಡಿ ವ್ಯಾಪಾರ ನಡೆಸಲು ಹಾಗೂ ರಾತ್ರಿ ವೇಳೆ ಸಂಚಾರ ಮಾಡಲು ಜನರು ಪರದಾಡುವಂತಾಗಿದೆ. ಬೇಸಿಗೆ ಬಿಸಿಲಿನ ನಡುವೆ ವಿದ್ಯುತ್ ಇಲ್ಲದೇ ವೃದ್ಧರು ಹಾಗೂ ಮಕ್ಕಳ ಆರೋಗ್ಯಕ್ಕೂ ತೊಂದರೆ ಉಂಟಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಜೆಸ್ಕಾಂ ಇಲಾಖೆ ದೇವದುರ್ಗ ಅಧಿಕಾರಿಗಳು ತಕ್ಷಣ ಗ್ರಾಮದಲ್ಲಿ ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಸಿ ನಿರಂತರ ವಿದ್ಯುತ್ ಸರಬರಾಜು ಕಲ್ಪಿಸಬೇಕು. ಇಲ್ಲವಾದರೆ ವಿದ್ಯುತ್ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

# ಬಳಗಾನೂರಿನ ಭವಿಷ್ಯದ ಬಾಗಿಲು ತೆರೆದಿದೆ!

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಬಳಗಾನೂರು ಪಟ್ಟಣದ ಶಿಕ್ಷಣ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ.2026–27ನೇ ಶೈಕ್ಷಣಿಕ ಸಾಲಿನಿಂದ ನೂತನ ಸರಕಾರಿ ಪದವಿಪೂರ್ವ ಕಾಲೇಜು ಆರಂಭವಾಗಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇದು ವಿದ್ಯೆಯ ಬೆಳಕಿನ ದೀಪವಾಗಿದೆ.**

ಇನ್ನು ದೂರದ ಊರುಗಳಿಗೆ ಅಲೆದಾಡುವ ಅವಶ್ಯಕತೆ ಇಲ್ಲ.ಸ್ವಂತ ಊರಲ್ಲೇ ಗುಣಮಟ್ಟದ ಶಿಕ್ಷಣ, ಉಚಿತ ಪಠ್ಯಪುಸ್ತಕಗಳು, ವಿದ್ಯಾರ್ಥಿ ವೇತನಗಳ ಸೌಲಭ್ಯಗಳೊಂದಿಗೆ ವಿದ್ಯಾರ್ಥಿಗಳ ಭವಿಷ್ಯ ಕಟ್ಟುವ ಅವಕಾಶ ಲಭ್ಯವಾಗಿದೆ. ಕಾಮರ್ಸ್ ಓದಿದ್ರೆ ಏನು ಸಿಗುತ್ತೆ?" ಅನ್ನೋ ಪ್ರಶ್ನೆಗೆ ಇಲ್ಲಿದೆ ಉತ್ತರ! ಇಂದು ವಾಣಿಜ್ಯ ಶಿಕ್ಷಣವು ಕೇವಲ ಒಂದು




ಕೋರ್ಸ್ ಅಲ್ಲ ಅದು ಉದ್ಯೋಗಗಳ ಮಹಾಸಾಗರ! B.Com ನಂತರ ವಿದ್ಯಾರ್ಥಿಗಳಿಗೆ ಬ್ಯಾಂಕಿಂಗ್, ಹಣಕಾಸು, ಆಡಿಟಿಂಗ್, ತೆರಿಗೆ ಸಲಹೆ, ಡಿಜಿಟಲ್ ಮಾರ್ಕೆಟಿಂಗ್, ಡೇಟಾ ಅನಾಲಿಸ್ಟ್, ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್, ಕಂಪನಿ ಕಾರ್ಯದರ್ಶಿ, ಸಿಎ, ಸಿಎಂಎ, ಎಂ.ಬಿ.ಎ, ಎಂ.ಕಾಂ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ

**ಪ್ರವೇಶಕ್ಕೆ ಬೇಕಾಗುವ ದಾಖಲಾತಿಗಳು**

- ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ
- ಎಸ್‌ಎಸ್‌ಎಲ್‌ಸಿ ಹಾಲ್ ಟಿಕೆಟ್
- ಮೂಲ ಖಿಅ
- ವಿದ್ಯಾರ್ಥಿಯ ಆಧಾರ್ ಕಾರ್ಡ್
- ಪೋಷಕರ ಆಧಾರ್ ಕಾರ್ಡ್
- ಜಾತಿ ಮತ್ತು ಆದಾಯ ಪ್ರಮಾಣ ಪತ್ರ
- ಬ್ಯಾಂಕ್ ಪಾಸ್ ಬುಕ್
- 6 ಭಾವಚಿತ್ರಗಳು
- ರೇಷನ್ ಕಾರ್ಡ್ ಜೆರಾಕ್ಸ್

ಭಾರೀ ಅವಕಾಶಗಳಿವೆ. IBPS, SBI, RBI, UPSC, SSC, ರೈಲ್ವೆ, ರಕ್ಷಣಾ ಇಲಾಖೆ ಸೇರಿದಂತೆ ಸರ್ಕಾರಿ ಉದ್ಯೋಗಗಳ ಬಾಗಿಲು ಕೂಡ ತೆರೆದಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಇ–ಕಾಮರ್ಸ್, ಆನ್‌ಲೈನ್ ವ್ಯವಹಾರ, ಷೇರು ಮಾರುಕಟ್ಟೆ, ಹಣಕಾಸು ಯೋಜನೆ, ಡಿಜಿಟಲ್ ಮಾರ್ಕೆಟಿಂಗ್ ಕ್ಷೇತ್ರಗಳಲ್ಲೂ ಕಾಮರ್ಸ್ ವಿದ್ಯಾರ್ಥಿಗಳು ಮಿಂಚುತ್ತಿದ್ದಾರೆ. ಪೋಷಕರ ಮತದಾರರ ಗುರುತಿನ ಚೀಟಿ, ಎಲ್ಲಾ ದಾಖಲಾತಿಗಳನ್ನು 2 ಜೆರಾಕ್ಸ್ ಪ್ರತಿಗಳಲ್ಲಿ ನೀಡಬೇಕು. ಹೋರಾಟದ ಫಲ ಈಗ ಉಳಿಸಿ ಬೆಳೆಸೋಣ!ಮಸ್ಕಿ ಶಾಸಕ ಆರ್,ಬಸನಗೌಡ ತುರುವಿಹಾಳರವರ ಪ್ರಯತ್ನ, ಬಳಗಾನೂರಿನ ಪ್ರಗತಿಪರ ಸಂಘಟನೆಗಳು, ರೈತಪರ, ವಿದ್ಯಾರ್ಥಿಪರ, ಮಹಿಳಾಪರ, ದಲಿತಪರ ಹಾಗೂ ಕನ್ನಡಪರ ಹೋರಾಟಗಾರರ ಒಗ್ಗಟ್ಟಿನ ಧ್ವನಿ ಮತ್ತು ಶಿಕ್ಷಣ ಪ್ರೇಮಿಗಳ ಮುಖಂಡರ,ಪಕ್ಷಾತೀತ ಶ್ರಮದ ಫಲವಾಗಿ ಈ ಕಾಲೇಜು ಮಂಜೂರಾಗಿದೆ.ಈಗ ಈ ಶಿಕ್ಷಣದ ಗಿಡವನ್ನು ದೊಡ್ಡ ವೃಕ್ಷವನ್ನಾಗಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಮೇಲಿದೆ.ಇಂದೇ ಪ್ರವೇಶ ಪಡೆಯಿರಿ? ನಿಮ್ಮ ಮಕ್ಕಳ ಭವಿಷ್ಯಕ್ಕೆ ಸರ್ಕಾರಿ ಭದ್ರ ಅಡಿಪಾಯ ಹಾಕಿರಿ!" **ವರದಿ: ಸುರೇಶ ಬಳಗಾನೂರು**

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐಟಿಐ ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್

ITI Draughtsman (Civil) ಒಂದು 2 ವರ್ಷಗಳ (4 ಸೆಮಿಸ್ಟರ್‌ಗಳು) ಅಖಿಲ ಭಾರತ ಮಟ್ಟದ ತಾಂತ್ರಿಕ ವೃತ್ತಿಪರ ಕೋರ್ಸ್ ಆಗಿದೆ. ಇದು ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಕಟ್ಟಡದ ನಕ್ಷೆಗಳು (blueprints), 2D/3D ರೇಖಾಚಿತ್ರಗಳು, ಮತ್ತು ಅಂಅ (AutoCAD) ಮೂಲಕ ವಿನ್ಯಾಸಗಳನ್ನು ಮಾಡಲು ತರಬೇತಿ ನೀಡುತ್ತದೆ. 10ನೇ ತರಗತಿ ಪಾಸಾದವರು ಪ್ರವೇಶ ಪಡೆಯಬಹುದು, ಮತ್ತು ಇದು NCVT ಮಾನ್ಯತೆ ಪಡೆದಿದೆ.ಕೋರ್ಸ್ ವಿವರಗಳು (Course Details in Kannada):ಕೋರ್ಸ್ ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು).ಅರ್ಹತೆ: 10ನೇ ತರಗತಿ ಉತ್ತೀರ್ಣ (ವಿಜ್ಞಾನ ಮತ್ತು ಗಣಿತದೊಂದಿಗೆ).ವಯೋಮಿತಿ: ಸಾಮಾನ್ಯವಾಗಿ 14 ವರ್ಷ ಮೇಲ್ಪಟ್ಟವರು.ಮಾನ್ಯತೆ: NCVT (National Council Vocational Training). ಕಲಿಕಾ ವಿಷಯಗಳು:ಕಟ್ಟಡದ ರೇಖಾಚಿತ್ರಗಳು (Building Planning & Drawing).AutoCAD ನಲ್ಲಿ 2D ಮತ್ತು 3ಆ ವಿನ್ಯಾಸ.ಅಂದಾಜು ಮತ್ತು ವೆಚ್ಚ ನಿರ್ಧಾರ (Estimation & Costing).ಸರ್ವೇಯಿಂಗ್ (ಖಣಡಿ–ತಜಥಿಟಿರ).ಕಟ್ಟಡ ಸಾಮಗ್ರಿಗಳ ಮಾಹಿತಿ.ಸಂಸ್ಥೆಗಳಲ್ಲಿ. CAD ಉದ್ಯೋಗಾವಕಾಶಗಳು (Career Opportunities):ಸಿವಿಲ್ ಡ್ರಾಫ್ಟ್ಸ್‌ಮನ್: ಖಾಸಗಿ ಮತ್ತು ಸರ್ಕಾರಿ ನಿರ್ಮಾಣ ಸಂಸ್ಥೆಗಳಲ್ಲಿ.CAD ಟೆಕ್ನಿಷಿಯನ್: ಕಂಪ್ಯೂಟರ್ ಏಡೆಡ್ ಡಿಸೈನಿಂಗ್ ವಿಭಾಗದಲ್ಲಿ.ಸೈಟ್ ಸೂಪರ್ವೈಸರ್: ನಿರ್ಮಾಣ ಸ್ಥಳಗಳಲ್ಲಿ ಉಸ್ತುವಾರಿ.ಸರ್ವೇಯರ್: ಭೂ ಮಾಪನ ವಿಭಾಗದಲ್ಲಿ.ಕ್ವಾಂಟಿಟಿ ಸರ್ವೇಯರ್: ನಿರ್ಮಾಣದ ವೆಚ್ಚ ಮತ್ತು ವಸ್ತುಗಳ ಅಂದಾಜು ಮಾಡುವವರು.

## ಡೆಂಗ್ಯು ಹರಡುವ ರೋಗ ಈಡಿಸ್ ಇಜಿಪ್ಟೈ ಸೊಳ್ಳೆ ಉತ್ಪತ್ತಿ ತಡೆಯಲು ನೀರು ಸಂಗ್ರಹಿಸುವ ಪರಿಕರಗಳಿಗೆ ಸರಿಯಾಗಿ ಮುಚ್ಚಳ ಮುಚ್ಚಿರಿ.

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡೆಂಗ್ಯು ರೋಗ ಹರಡುವ ಈಡಿಸ್ ಇಜಿಪ್ಟೈ ಸೊಳ್ಳೆಯ ನಿಯಂತ್ರಣಕ್ಕಾಗಿ ಮನೆಯ ಹೊರಗೆ ಒಳಗೆ ಬಳಕೆಗಾಗಿ ನೀರು ತುಂಬಿಡುವ ಡ್ರಮ್, ಬ್ಯಾರಲ್, ಸಿಮೆಂಟ್ ತೊಟ್ಟಿ ಮುಂತಾದವುಗಳಲ್ಲಿ ಸೊಳ್ಳೆ ಮೊಟ್ಟೆ ಇಟ್ಟು ಸೊಳ್ಳೆಗಳ ಉತ್ಪತ್ತಿಯಾಗದಂತೆ ತಡೆಯಲು ವಾರಕ್ಕೊಮ್ಮೆ ಎಲ್ಲ ನೀರಿನ ಪರಿಕರಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ನೀರು ತುಂಬಿದ ನಂತರ ಸೊಳ್ಳೆ ನೀರಿನ ಮೇಲೆ ಮೊಟ್ಟೆ ಇಡದ ಹಾಗೆ ಮುಚ್ಚಳ ಮುಚ್ಚಲು ಅಥವಾ ಹಳೆಯ ಬಟ್ಟೆಯಿಂದ ಮುಚ್ಚಿ ಕಟ್ಟುವ ಮೂಲಕ ಸಹಕರಿಸಲು ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ಜನತೆಗೆ ಕೋರಿದರು.**



ಕಲ್ಮಲ ಪ್ರಾಥಮಿಕ ಆರೋಗ್ಯ ಕೇಂದ್ರದ ಕಲ್ಮಲ ಗ್ರಾಮದ ಮಸ್ತಾನ್ ತಾತ ಕಟ್ಟೆಯ ಬಳಿ ಜನಜಾಗೃತಿ ನೀಡಿ ಮಾತನಾಡುತ್ತಾ, ಡೆಂಗ್ಯು ಹರಡುವ ಸೊಳ್ಳೆಯ ಲಾರ್ವಾ ಉತ್ಪತ್ತಿ ತಾಣಗಳಾದ ಡ್ರಮ್, ಬ್ಯಾರಲ್, ಮಣ್ಣಿನ ಮಡಕೆ, ಸಿಮೆಂಟ್ ತೊಟ್ಟಿ, ಮನೆಯ ಸುತ್ತಮುತ್ತ ಬಿಸಾಡಿದ ಘನ ತ್ಯಾಜ್ಯ ವಸ್ತುಗಳಾದ, ತೆಂಗಿನ ಚಿಪ್ಪು, ಒಡೆದ ಬಕೆಟ್, ಕೊಡ, ಟೈರು, ಇತರೆ ವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಸರಿಯಾದಪ ಸ್ಥಳದಲ್ಲಿ ಹಾಕಿ ವಿಲೇವಾರಿ ಮಾಡಿ, ಮನೆಯ ಮುಂದೆ ಚರಂಡಿಯಲ್ಲಿ ಕಸ ಹಾಕದೆ, ಚರಂಡಿಯ ನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳಿ ಎಂದು ವಿನಂತಿಸಿದರು.

ಬೇಸಿಗೆ ಮುಂಜಾಗೃತೆ: ಬಿಸಿಲಿನ ಪ್ರಖರತೆ ಹಿನ್ನೆಲೆಯಲ್ಲಿ ಮಧ್ಯಾನ್ನದ ಅವಧಿಯಲ್ಲಿ ಗರ್ಭಿಣಿ, ಬಾಣಂತಿ, ಚಿಕ್ಕ ಮಕ್ಕಳು, ವಯೋವೃದ್ಧರು, ಧೀರ್ಘಕಾಲದ ಚಿಕಿತ್ಸೆ ಪಡೆಯುವವರು ಮನೆಯ ಹೊರಗೆ ಹೋಗುವ ಅವಶ್ಯಕತೆ ಇದ್ದಲ್ಲಿ ಕುಡಿಯುವ ನೀರು, ಛತ್ರಿ, ಜೊತೆಯಲ್ಲಿರುವಂತೆ, ನಿಗಾ ವಹಿಸಲು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ತಿಳಿಸಿದರು.

ಹೆಚ್‌ಪಿವಿ ಲಸಿಕೆ: ಗರ್ಭಕಂಠದ ಕ್ಯಾನ್ಸರ್ ತಡೆಯಲು ಪ್ರಸ್ತುತ ಸರಕಾರವು14 ವರ್ಷದ ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ಲಸಿಕೆ ಹಾಕುತ್ತಿದ್ದು ತಪ್ಪದೆ ಹಾಕಿಸಲು ಕೋರಲಾಯಿತು.

ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ ಕ್ಯೂ ಅರ್ ಕೋಡ್ ಬಳಸಿ ಹೆಚ್‌ಐವಿ ಸೋಂಕಿನ ಸಾಧ್ಯತೆಗಳನ್ನು ಗುರ್ತಿಸುವ ಕಾರ್ಯದ ಸದುಪಯೋಗ ಪಡೆಯಲು ತಿಳಿಸಲಾಯಿತು. ಈ ಸಂದರ್ಬದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಹಿರಿಯ ಪಿಹೆಚ್‌ಸಿಓ, ರೇಣುಕಾ, ಸೇರಿದಂತೆ ಆಶಾ ಕಾರ್ಯಕರ್ತೆಯರು ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

## ಸಿರುಗುಪ್ಪ : ಸಿರಿಗೇರಿ ಸರ್ಕಾರದ ಯೋಜನೆ ರೈತರಿಗೆ ಯಶಸ್ವಿನಿ ಕಾರ್ಡ್ ಸಹಕಾರಿ ಅವಿನಾಶ್ ರೆಡ್ಡಿ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ತಾಲೂಕು ಸಿರಿಗೇರಿ ಗ್ರಾಮದ ಪ್ರಾಥ–'ಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಸರಕಾರದ ಯೋಜನೆಯಾದ ಯಶಸ್ವಿನಿ ಕಾರ್ಡ್ ವಿತರಣಾ ಕಾರ್ಯಕ್ರಮ ದಲ್ಲಿ ಪ್ರಭಾರ ಮುಖ್ಯ ಕಾರ್ಯನಿರ್ವಾಹಕ ಅವಿನಾಶ್ ರೆಡ್ಡಿ ಕಾರ್ಡ್ ವಿತರಿಸಿ ಮಾತನಾಡುತ್ತಾ ಬಳ್ಳಾರಿ ಜಿಲ್ಲೆಯ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು.**



ಅಂದಾಜು 230 ಯಶಸ್ವಿನಿ ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದು ರೈತರ ಅನುಕೂಲಕ್ಕಾಗಿ ರಾಜ್ಯ ಸರ್ಕಾರ ಸಹಕಾರ ಸಂಘಗಳಲ್ಲಿ ಯಶಸ್ವಿನಿ ಯೋಜನೆಯನ್ನು ಜಾರಿಗೆ ತಂದು ಬಡ ರೈತರ ಅನುಕೂಲಕ್ಕಾಗಿ ಒಂದು ಕುಟುಂಬಕ್ಕೆ 5 ಲಕ್ಷ ರೂ ವರೆಗೆ ಶಸ್ತ್ರ ಚಿಕಿತ್ಸೆಗೆ ಅನುಮೋದಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ತುಂಬಾ ಸಹಕಾರಿಯಾಗಿದೆ ಎಂದು ಅವರು ಮಾತನಾಡುತ್ತಿದ್ದರು ವ್ಯಾಥಾಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಬಿ ಸೋಮಶೇಖರಪ್ಪ ಉಪಾಧ್ಯಕ್ಷರು ದರೂರು ಚೆನ್ನಪ್ಪ ನಿರ್ದೇಶಕರಾದ ಎಸ್‌ಎಂ ನಾಗರಾಜ ಸ್ವಾಮಿ ಗರ್ಜಿಲಿಂಗಪ್ಪ ಬಕಾಟೆ ವೀರೇಶ್ ಬಿಚ್ಚುಗತ್ತಿಮಲ್ಲಯ್ಯ ಭಜಂತ್ರಿ ರಮೇಶ್ ಕಡ್ಡಿಪುಡಿ ಶಿವಪ್ಪ ಸುಗ್ನಳ್ಳಿ ರುದ್ರಪ್ಪ ಫಲಾನುಭವಿಗಳಾದ ಬಕಾಟೆ ಕುಮಾರಪ್ಪ ಗಾದಿಲಿಂಗಪ್ಪ ಕೆ ಶಂಕ್ರಮ್ಮ ಸಣ್ಣ ಹೊನ್ನೂರಪ್ಪ ಏರ್ರಿಸ್ವಾಮಿ ನಬಿ ಸಾಬ್ ಸಿಬ್ಬಂದಿ ಸುರೇಶ್ ರಂಜಾನ್ ಸಾಬ್ ರೈತ ಸದಸ್ಯರು ಇದ್ದರು. ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

## 'ಕುಚುಕು' ಚಲನಚಿತ್ರ ಮೇ.22 ರಂದು ತೆರೆಗೆ



ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಶ್ರೀ ಚಾಮುಂಡೇಶ್ವರಿ ಪಿಕ್ಚರ್ ಬ್ಯಾನರ್ ಮೈಸೂರು ಅವರ ಸ್ನೇಹದ ಮಹತ್ವ ಸಾರುವ "ಕುಚುಕು" ಕನ್ನಡ ಚಲನಚಿತ್ರ ಇದೆ ಮೇ.22 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.**

ಚಿತ್ರರಂಗದಲ್ಲಿ "ಕುಚುಕು" ಎಂಬ ಹೆಸರು ಕೇಳಿದೊಡನೆಯೇ ತಟ್ಟನೆ ನೆನಪಾಗುವುದು ಚಿತ್ರರಂಗದ ಮೇರು ನಟ–ರಾದ ರೆಬೆಲ್ ಸ್ಟಾರ್ ಅಂಬರೀಷ್ ಹಾಗೂ ಸಾಹಸಸಿಂಹ ವಿಷ್ಣುವರ್ಧನ್. ಅವರ ಸವಿ ನೆನಪಿನಲ್ಲಿ ನಿರ್ಮಾಣವಾದ ಸ್ನೇಹಿತರಿಬ್ಬರ ಬಾಂಧವ್ಯದ ಚಿತ್ರವೇ ಈ 'ಕುಚುಕು'. ಕಾರವಾರ, ಹೊನ್ನಾವರ, ಮೈಸೂರು ಭಾಗಗಳಲ್ಲಿ ಸುಮಾರು ನಲವತ್ತೈದು ದಿನಗಳ ಕಾಲ ಸತತ ಚಿತ್ರೀಕರಣ ನಡೆಸಲಾಗಿದೆ, ಚಿತ್ರದಲ್ಲಿನ ಐದು ಹಾಡುಗಳಿಗೆ ನೃತ್ಯ ಸಂಯೋಜನೆಯನ್ನು ಚಿತ್ರದ ನಿರ್ದೇಶಕರೆ ನಿರ್ವಹಿಸಿದ್ದು, ನಾಲ್ಕು ಸಾಹಸ ದೃಶ್ಯಗಳನ್ನು ಮಾಸ್ ಮಾದ, ಹ್ಯಾರೀಶ್ ಜಾನಿ, ಪವರ್ ಪುಷ್ಪರಾಜ್ ಸಂಯೋಜಿಸಿದ್ದಾರೆ.

ಚಿತ್ರದ ತಾರಾಗಣದಲ್ಲಿ ನಾಯಕ ನಟನಾಗಿ ಅರ್ಜುನ್ ಚವ್ಹಾಣ್, ಬಸವರಾಜ್ ಕುಮಾರ್, ನಾಯಕಿಯಾಗಿ ಪ್ರಿಯದರ್ಶಿನಿ , ಪೋಷಕ ಪಾತ್ರಗಳಲ್ಲಿ ಬಾಲರಾಜ್ ವಾಡಿ, ಶಂಕರ್ ಅಶ್ವಥ್, ರಮೇಶ್ ಪಂಡಿತ್, ಹನುಮಂತೇಗೌಡ್ರು, ಶಿವಾಜಿ, ಮಜಾ ಟಾಕೀಸ್ ಜಗ್ಗಪ್ಪ, ಕೈಲಾಶ್ ಕುಟ್ಟಪ್ಪ, ಯಶೋದಮ್ಮ, ಡ್ರಾಮಾ ಜೂನಿಯರ್ ಮಹೇಂದ್ರ, ಶಶಿಗೌಡ ಮೊದಲಾದವರಿದ್ದಾರೆ. ಛಾಯಾಗ್ರಹಣ ರಾಮನಾಥ ರಾಜ್, ಸಂಕಲನ ಅರವಿಂದ್ ರಾಜ್,

ಸಂಗೀತ ಎ ಟಿ ರವೀಶ್, ಹಿನ್ನೆಲೆ ಸಂಗೀತ ಸೂರಜ್, ಸಾಹಸ ಮಾಸ್ ಮಾದ, ಹ್ಯಾ–ರೀಶ್ ಜಾನಿ, ಪವರ್ ಪುಷ್ಪ ರಾಜ್, ಸಂಭಾಷಣೆ ಹಾಗೂ ಸಹ ನಿರ್ದೇಶನ ರವಿಶಂಕರನಾಗ್, ಪಿಆರ್ ಓ ಸುಧೀಂದ್ರ ವೆಂಕಟೇಶ್, ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ ಅವ–ರಿದ್ದು,. ನಿರ್ದೇಶನ ಮೈಸೂರ್ ರಾಜು ಮಾಡಿದ್ದಾರೆ. ಶ್ರೀಮತಿ ನಾಗರತ್ನಮ್ಮ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಮನೆಮಂದಿಯೆಲ್ಲ ಕುಳಿತು ನೋಡುವ ಚಿತ್ರ ಇದಾಗಿದೆ ಎಂದು ನಿರ್ದೇಶಕ ಮೈಸೂರು ರಾಜು ತಿಳಿಸಿದ್ದಾರೆ.

## ಮಾವಿನ ಕೆರೆಗೆ ಜಿಲ್ಲಾಧಿಕಾರಿ ಎಸ್.ಪೂವಿತಾ ಭೇಟಿ: ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ನಗರದ ಐತಿಹಾಸಿಕ ಮಾವಿನಕೆರೆ ಪ್ರದೇಶಕ್ಕೆ ಜಿಲ್ಲಾಧಿಕಾ–ರಿಗಳಾದ ಎಸ್.ಪೂವಿ ಅವರು ಮೇ.13ರ ಬುಧುವಾರ ದಂದು ಭೇಟಿ ನೀಡಿ ಪರಿಶೀಲಿಸಿದರು. ಕೆರೆ ಅಭಿವೃದ್ಧಿ ಕಾಮಗಾರಿಯ ವೀಕ್ಷಣೆ ನಡೆಸಿ, ಜಿಲ್ಲಾಧಿಕಾರಿ ಎಸ್.ಪೂವಿತಾ ಅವರು ಮಾತನಾಡಿ, ಕೆರೆ ಅಭಿವೃದ್ಧಿ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು.**

ಕಾಮಗಾರಿಗೆ ಯಾವುದೇ ಅಡೆತಡೆ ಬಂದರೆ ಕೂಡಲೇ ಜಿಲ್ಲಾಡಳಿತವನ್ನು ಸಂಪರ್ಕ ಮಾಡಬೇಕು. ಹಾಗೂ ಕಾಮಗಾ–ರಿಯನ್ನು ಗುಣಮಟ್ಟದಿಂದ ಮಾಡಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ



ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ನಂತರ ಸಂಬಂಧಿಸಿದ ಇಲಾಖೆಯ ಅಧಿಕಾ–ರಿಗಳಿಂದ ಕೆರೆಯ ವಿಸ್ತರಣೆ ಮಾಹಿತಿಯನ್ನು ಪಡೆದರು. ಮಾವಿನಕೆರೆಗೆ ಬೇರೆ ಬೇರೆ ಕಡೆಗಳಿಂದ ಗಟಾರು ನೀರು ಕೆರೆಗೆ ಹ–ರಿದು ಬರದಂತೆ ನೋಡಿಕೊಳ್ಳಬೇಕು.

ಸಾರ್ವಜನಿಕರು ಕೆರೆಗೆ ಕಸ ಮತ್ತು ಪ್ಲಾಸ್ಟಿಕ್ ಎಸೆಯದಂತೆ ಜನರಲ್ಲಿ ಜಾಗೃತಿ ಮೂಡಿಸಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾ–ರಿಗಳು ನಿರ್ದೇಶನ ನೀಡಿದರು. ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಕೆರೆ ಅಭಿವೃದ್ಧಿ ಮತ್ತು ಸಂರಕ್ಷಣಾಧಿಕಾರಿ ಆನಂದ ರೆಡ್ಡಿ, ಕೆರೆ ಇಂಜಿನಿಯರ್ ಬಸವರಾಜ ಸೇರಿದಂತೆ ಗುತ್ತೇದಾರರು, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು

## ಕುಡಿಯುವ ನೀರಿನ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸಲು ಅಧಿಕಾಗಳಿಗೆ ತುರ್ವಿಹಾಳ್ ಸೂಚನೆ



ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ಸರ್ಜಾಪುರ ಹಾಗೂ ಕುಪ್ಪಿಗುಡ್ಡ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ತ್ವರಿತ ಗತಿಯಲ್ಲಿ ಸ್ಪಂದಿಸಬೇಕೆಂದು ಶಾಸಕ ಬಸನಗೌಡ ತುರ್ವಿಹಾಳ ಅಧಿಕಾರಿಗಳಿಗೆ ಸೂಚಿಸಿದರು.**

ಅವರಿಂದು ತಾಲೂಕಿನ ಸರ್ಜಾಪುರ ಗ್ರಾಮದ ಕೆರೆಗೆ ಭೇಟಿ ನೀಡಿ ಬಳಿಕ ಗ್ರಾ.ಪಂ.ನಲ್ಲಿ ಅಧಿಕಾರಿಗಳ ಜೊತೆ ಸಭೆ ನಡೆಸಿದ ಅವರು, ಸರ್ಜಾಪುರ ಮತ್ತು ಕುಪ್ಪಿಗುಡ್ಡ ಗ್ರಾಮಗಳಿಗೆ ನೀರು ಸರಬರಾಜು ಮಾಡುವ ನೀರು ಗಂಟೆಯಿಂದಲೇ ಸಮಸ್ಯೆ ಎದುರಾಗಿದೆ. ಗ್ರಾಮದ ಆಂಜನೇಯ ದೇವಸ್ಥಾನದ ಸುತ್ತಮುತ್ತಲ ಪ್ರದೇಶಗಳಿಗೆ ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡುತ್ತಿಲ್ಲ. ಬಹು ಗ್ರಾಮ ಕುಡಿಯುವ ನೀರು ಯೋಜನೆ ಮತ್ತು ಕೆರೆಯಲ್ಲಿ ನೀರು ಸಂಗ್ರಹವಿದ್ದರೂ ನೀರುಗಂಟೆ ಸರಿಯಾದ ಸಮಯಕ್ಕೆ ಕುಡಿಯುವ ನೀರು ಪೂರೈಕೆ ಮಾಡುತ್ತಿಲ್ಲ.

ಕೂಡಲೇ ಹೊಸದಾಗಿ ನೀರುಗಂಟೆಯನ್ನು ನೇಮಕ ಮಾಡಬೇಕು ಅಥವಾ ಅವರನ್ನು ಬೇರೆಡೆ ವರ್ಗಾವಣೆ ಮಾಡಬೇಕೆಂದು ಗ್ರಾಮಸ್ಥರು ಶಾಸಕರಿಗೆ ಒತ್ತಾಯಿಸಿದರು. ಗ್ರಾಮಸ್ಥರಿಂದ ಮನವಿ ಆಲಿಸಿದ ಶಾಸಕರು ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶದಲ್ಲಿ ಹೊಸದಾಗಿ ಬೋರ್ವೆಲ್ ಕೊರೆಯಿಸಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸ ಬೇಕೆಂದು ತಾ.ಪಂ ಇಒ ಉಮೇಶ್ ಹಾಗೂ ಪಿಡಿಒ ಬಸವರಾಜ ಅವರಿಗೆ ಸೂಚಿಸಿದರು. ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಪಿಡಿಒ ವರ್ಗಾವಣೆ ಗೊಂಡಿದ್ದು, ಆ ಸ್ಥಾನಕ್ಕೆ ಬಸವರಾಜ ಎಂಬುವರು ಬಂದಿದ್ದಾರೆ. ಆದ–'ರೆ ಹಿಂದಿನ ಪಿಡಿಒ ಅವರು ಬಸವರಾಜ ಅವರಿಗೆ ಅಧಿಕಾರ ಹಸ್ತಾಂತರಿಸಿಲ್ಲ. ಹೀಗಾಗಿ ಸಮರ್ಪಕವಾಗಿ ಆಡಳಿತ ನಡೆಸಲು ಸಾಧ್ಯವಾಗುತ್ತಿಲ್ಲ. ಹಿಂದಿನ ಪಿಡಿಒ ವಿನಾಕಾರಣ ವಿಳಂಬ ಧೋರಣೆ ತೋರುತ್ತಿದ್ದು, ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮಸ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಮುಖಂಡರಾದ ಶಂಕರಗೌಡ, ಹನುಮಂತ್ರಾಯ ನೆಲೋಗಿ, ಶಿವಪುತ್ರ ಕುಪ್ಪಿಗುಡ್ಡ, ಭಗೀರಥ, ನಿಜಗುಣಿ ಸೇರಿದಂತೆ ಇತರರು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ತುಂಗಭದ್ರಾ ಡ್ಯಾಮ್ 33 ಕ್ರಸ್ಟ್ ಗೇಟ್ ಗಳಿಗೆ ಹೊಸ ಚೈನ್ ಅಳವಡಿಸುವ ಕಾರ್ಯ ಆರಂಭ ಮೇ ಅಂತ್ಯದೊಳಗೆ ಪೂರ್ಣ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ಹೊಸಪೇಟೆ ವಿಜಯನಗರ ತುಂಗಭದ್ರಾ ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವೆನಿಸಿರುವ ಕ್ರಸ್ಟ್ ಗೇಟ್ ಗಳಿಗೆ ಹೊಸ ಚೈನ್ ಅಳವಡಿಸುವ ಕಾರ್ಯಕ್ಕೆ ಮೇ 14ರಂದು ಚಾಲನೆ ಸಂಪೂರ್ಣ ಹೊಸ ಸ್ವರೂಪದಲ್ಲಿ ಜಲಾಶಯ ನೀರುಉಣಿಸಲು ಸಜ್ಜಾಗಲಿದೆ ತುಂಗಭದ್ರಾ ಮಂಡಳಿ ಕಾರ್ಯದರ್ಶಿ ಓ ಆರ್ ಕೆ ರೆಡ್ಡಿ ಅವರು ಪ್ರಕಟಿಸಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಸಾಕ್ಷರತಾ ಸದಸ್ಯರು ಅಬ್ದುಲ್ ನಬಿ ತಿಳಿಸಿದರು.**

ಕಳೆದ ವರ್ಷ 19ನೇ ಕ್ರಸ್ಟ್ ಗೇಟ್ ನಲ್ಲಿ ಎದುರಾದ ತಾಂತ್ರಿಕ ಸವಾಲುಗಳನ್ನು ಮನಗಂಡ ತಜ್ಞರು ಮುನ್ನೆಚ್ಚ–ರಿಕೆ ಕ್ರಮವಾಗಿ ಜಲಾಶಯದ ಎಲ್ಲಾ ಕ್ರಸ್ಟ್ ಗೇಟ್ ಗಳನ್ನು ಅಧುನಿಕರಿಸುವ ನಿಟ್ಟಿನಲ್ಲಿ ಬಹುದೊಡ್ಡ ಹೆಜ್ಜೆ ಇರಿಸಿದ್ದಾರೆ ಈ ಮೂಲಕ ಜಲಾಶಯದ ಭದ್ರತೆಯ ಬಗ್ಗೆ ರೈತರಲ್ಲಿದ್ದ ಆತಂಕ ದೂರ ಮಾಡುವ ಕಾಲ ಹತ್ತಿರವಾಗಿದೆ ಜಲಾಶಯ ನಿರ್ಮಾಣದ ನಂತರ ಮೊದಲ ಬಾರಿ ಕ್ರಸ್ಟ್ ಗೇಟ್ ಗಳಿಗೆ ಸಂಪೂರ್ಣ ಹೊಸ ಸ್ಪರ್ಶ ನೀಡಲಾಗುತ್ತಿದೆ 5.8 ಕೋಟಿ ರೂ ವೆಚ್ಚ ಅಂದಾಜಿಸಲಾಗಿದೆ ಒಟ್ಟು 66 ಹೊಸ ಚೈನ್ ಗಳನ್ನು ಚೆನ್ನೈನಲ್ಲಿ ನಿರ್ಮಿಸಲಾಗಿದೆ ಪ್ರತಿ ಚೈನ್ 1.9 ಟನ್ ತೂಕ ಹೊಂದಿದೆ 33 ಕ್ರಸ್ಟ್ ಗೇಟ್ ಗಳಿಗೆ ತಲಾ ಎರಡರಂತೆ ಈ ಚೈನ್ ಗಳನ್ನು ಅಳವಡಿಸಲಾಗುತ್ತದೆ ಮೊದಲ ಹಂತದಲ್ಲಿ 5 ಚೈನ್‌ಗಳು ಜಲಾಶಯದ ಆವರಣ ತಲುಪಿದ್ದು ಉಳಿದವು ಹಂತ ಹಂತವಾಗಿ ಬರಲಿವೆ ಚೆನ್ನೈನಿಂದ ಬಂದ ಹೊಸ ಚೈನ್ ಗಳು: ಚೆನ್ನೈನಿಂದ ಬಂದಿಳಿದಿರುವ ಹೊಸ ಚೈನ್ ಗಳ ಅಳವಡಿಕೆಗೆ ಹೆಚ್ಚುವರಿ ತಂಡಗಳನ್ನು ನಿಯೋಜಿಸಲಾಗುತ್ತಿದೆ.

ಈ ಪ್ರಕ್ರಿಯೆಯನ್ನು ಮೇ ಅಂತ್ಯದೊಳಗೆ ಮುಗಿಸಲೇಬೇಕಾದ ಅನಿವಾರ್ಯತೆ ತಾಂತ್ರಿಕ ತಂಡಕ್ಕಿದೆ ಜಲಾಶಯದ ಒಟ್ಟು 33 ಕ್ರಸ್ಟ್ ಗೇಟ್ ಗಳ ಪೈಕಿ ಕೊನೆಯದಾದ 33ನೇ ಕ್ರಸ್ಟ್ ಗೇಟ್ ಗೆ ಮೊದಲ ಚೈನ್



ಅಳವಡಿಸಲು ತೀರ್ಮಾನಿಸಲಾಗಿದೆ ಹಳೆಯ ಚೈನ್ ಗಳನ್ನು ತೆರವುಗೊಳಿಸಿ ಹೊಸದಾಗಿ ಬಂದಿರುವ ಚೈನ್ ಅಳವಡಿಸಿ ಕ್ರಸ್ಟ್ ಗೇಟ್ ಗಳ ಚಾಲನೆಯನ್ನು ಪ್ರಯೋಗಿಕವಾಗಿ ಕೈಗೊಳ್ಳಲಾಗುತ್ತದೆ ಈ ಪ್ರಕ್ರಿಯೆ ಯಶಸ್ವಿಯಾದಲ್ಲಿ ಉಳಿದ ಕ್ರಸ್ಟ್ ಗೇಟ್ ಗಳಿಗೆ ಚೈನ್ ಅಳವಡಿಕೆ ವೇಗ ಪಡೆಯಲಿದೆ.

ಆ. 10ರ ಕರಾಳ ಅಧ್ಯಾಯ : 2025 ಆ.10 ರಂದು ಜಲಾಶಯದ 19ನೇ ಕ್ರಸ್ಟ್ ಗೇಟ್ ಚೈನ್ ತುಂಡಾಗಿ ಭಾರಿ ದುರಂತ ಸಂಭವಿಸಿತ್ತು ಅಪಾರ ಪ್ರಮಾಣದ ನೀರು ಹೊರಹ–ರಿದು ಆತಂಕ ಸೃಷ್ಟಿಸಿತ್ತು ಆ ಸಂದರ್ಭದಲ್ಲಿ ತಾತ್ಕಾಲಿಕ ಸ್ಟಾಪ್ ಲಾಗ್ ಗೇಟ್ ಅಳವಡಿಸಿ ನೀರು ಸಂಗ್ರಹಿಸಿ ಬೆಳೆಗಳಿಗೆ ಹ–ರಿಸಲಾಗಿತ್ತು ನಂತರ ಶಾಶ್ವತ ಗೇಟ್ ಅಳವಡಿಸುವ ಮೂಲಕ ಯಶಸ್ವಿ ಕಾರ್ಯಾಚರಣೆ ನಡೆಸಲಾಗಿತ್ತು ಈ ಹಿನ್ನೆಲೆಯಲ್ಲಿ ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ಹಳೆಯ ಚೈನ್ ಗಳನ್ನು ಬದಲಾಯಿಸಲು ತೀರ್ಮಾನಿಸಲಾಗಿದೆ.

ಮೇ ಅಂತ್ಯದೊಳಗೆ ಪೂರ್ಣ : ಒಂದು ಕ್ರಸ್ಟ್ ಗೇಟ್ ಗೆ ಚೈನ್ ಅಳವಡಿಸಲು 2 ರಿಂದ 3 ದಿನ ಬೇಕಾಗುತ್ತದೆ 33ನೇ ಕ್ರಸ್ಟ್ ಗೇಟ್ ನ ಪ್ರಾಯೋಗಿಕ ಅಳವಡಿಕೆ ಯಶಸ್ವಿಯಾದ ನಂತರ ಕೆಲಸದ ವೇಗ ಹೆಚ್ಚಿಸಲು ಹೆಚ್ಚುವರಿ ತಾಂತ್ರಿಕ ತಂಡಗಳನ್ನು ನಿಯೋಜಿಸಲು ಅಧಿಕಾ–ರಿಗಳು ಯೋಜಿಸಿದ್ದಾರೆ ಮೇ ಅಂತ್ಯದ ವೇಳೆಗೆ ಎಲ್ಲಾ ಕ್ರಸ್ಟ್ ಗೇಟ್ ಗಳ ಚೈನ್ ಅಳವಡಿಕೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಜಲಾಶಯದಲ್ಲಿ ಸದ್ಯ ಕ್ರಸ್ಟ್ ಗೇಟ್ ಗಳಿಗೆ ಬಣ್ಣ ಲೇಪಿಸುವ ಕೆಲಸ ಭರದಿಂದ ಸಾಗಿದೆ ಒಂದೆರಡು ಕ್ರಸ್ಟ್ ಗೇಟ್ ಗಳ ವೆಲ್ಡಿಂಗ್ ಕೆಲಸ ಅಂತಿಮ ಹಂತದಲ್ಲಿದೆ ಚೈನ್ ಅಳವಡಿಕೆಗೆ ಪೂರಕವಾದ ಸಿದ್ಧತೆಗಳು ಚುರುಕು ಪಡೆದಿವೆ ಜಲಾಶಯದ ಎಲ್ಲಾ 33 ಕ್ರಸ್ಟ್ ಗೇಟ್ ಗಳಿಗೆ ಹೊಸ ಚೈನ್ ಅಳವಡಿಸುತ್ತಿರುವುದು ಜಲಾಶಯದ ಆಯಸ್ಸು ಮತ್ತು ಭದ್ರತೆಯನ್ನು ಹೆಚ್ಚಿಸುವ ಆಶಾಭಾವ ಮೂಡಿಸಿದೆ ತುಂಗಭದ್ರಾ ಡ್ಯಾಮ್ ನ ಹೊಸ ಕ್ರಸ್ಟ್ ಗೇಟ್ ಗಳ ಅಳವಡಿಕೆ ಯಶಸ್ವಿಯಾಗಿ ಮುಕ್ತಾಯಗೊಂಡಿದೆ ಕ್ರಸ್ಟ್ ಗೇಟ್ ಗಳಿಗೆ ಹೊಸ ಚೈನ್ ಅಳವಡಿಕೆ ಸೇರಿ ಬಾಕಿ ಎಲ್ಲಾ ತಾಂತ್ರಿಕ ಕೆಲಸಗಳನ್ನು ಮೇ ಅಂತ್ಯದೊಳಗೆ ಪೂರ್ಣ ಗೊಳಿಸಲಾಗುವುದು ತುಂಗಭದ್ರಾ ಮಂಡಳಿ ಕಾರ್ಯದರ್ಶಿ ಓಆರ್ ಕೆ ರೆಡ್ಡಿ ಅವರು ಪ್ರಕಟಿಸಿದ್ದಾರೆ ಎಂದು ಸಮಾಜ ಸೇವಕರು ಅಬ್ದುಲ್ ನಬಿ ತಿಳಿಸಿದರು. ವರದಿ: ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.